ಇನ್ನಷ್ಟು ಸ್ಥಳೀಯ ಸುದ್ದಿಗಳು ಪುಟ 13-16 ರಲ್ಲಿ

ಕನ್ನಡಪ್ರಭ
ಶನಿವಾರ 9.05.2026

ಗರಿಷ್ಠ 34°c | ಕನಿಷ್ಠ 23°c

ಸುದ್ದಿ ಸಿಂಚನ

ಮನುವನ ಪಾರ್ಕ್ ಬಳಿ ಇದ್ದ ಕಂಟೈನರ್ ತೆರವು



ಕನ್ನಡಪ್ರಭ ಫಲಶ್ರುತಿ

ಮೊನ್ನೆ ಕನ್ನಡಪ್ರಭ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಕೋರ್ಟ್ ಮುಂದೆ ಇರುವ ಮನು ವನ ಪಾರ್ಕ್ ಬಳಿ ಇದ್ದ ಕಂಟೈನರ್ ಅನ್ನು ಇಂದು ತೆರವು ಗೊಳಿಸಲಾಗಿದೆ. ಸಾರ್ವಜನಿಕರಿಗೆ ಆದ ತೊಂದರೆಗೆ ಕ್ಷಮೆ ಯಾಚಿಸುತ್ತೇನೆ. ನಮ್ಮನ್ನು ಎಚ್ಚರಿಸಿದ್ದಕ್ಕಾಗಿ ವಕೀಲ ರಾಘವೇಂದ್ರ, ಹಾಗೂ ಕನ್ನಡಪ್ರಭ ಪತ್ರಿಕೆಗೆ ಅಭಿನಂದನೆ ಸಲ್ಲಿಸುತ್ತೇನೆ.

• **ಸುರೇಶ್ ಕುಮಾರ್ ಜೈನ್** ಕಾರ್ಯದರ್ಶಿ, ಜಿಲ್ಲಾ ಕೈಗಾರಿಕೆಗಳ ಸಂಘ

ಅಪರಿಚಿತ ವ್ಯಕ್ತಿ ಸಾವು

ಮೈಸೂರು: ನಗರದ ಇರ್ವಿನ್ ರಸ್ತೆಯ ಫುಟ್ ಪಾತ್ ಬಳಿ ಅಸ್ವಸ್ಥರಾಗಿ ಬಿದ್ದು 108 ಆಂಬ್ಯುಲೆನ್ಸ್ ಮೂಲಕ ಕೆ.ಆರ್. ಆಸ್ಪತ್ರೆಗೆ ದಾಖಲಾಗಿದ್ದ 56 ವರ್ಷದ ಅಪರಿಚಿತ ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೇ ಮೇ 3 ರಂದು ಮೃತಪಟ್ಟಿದ್ದಾರೆ. ಮೃತರ ಚಹರೆ- 5.6 ಅಡಿ ಎತ್ತರ, ಸಣಕಲು ಮೈಕಟ್ಟು, ಗೋಧಿ ಮೈಬಣ್ಣ, ಬಿಳಿ ಮತ್ತು ಕಪ್ಪು ತಲೆ ಕೂದಲು, ನೀಳವಾದ ಗಡ್ಡ ಮೀಸೆ ಬಿಟ್ಟಿದ್ದಾರೆ. ಎಡ ಹಣೆಯ ಮೇಲೆ ಹಳೆ ಗಾಯದ ಗುರುತು ಮತ್ತು ಬಲ ಮುಂಗೈಯಲ್ಲಿ ಕಪ್ಪು ಬಣ್ಣದ ಮಚ್ಚೆ ಗುರುತಿದೆ. ಮೃತರ ವಾರಸುದಾರರು ಇದ್ದಲ್ಲಿ ದೂ. 0821- 2418307 ಸಂಪರ್ಕಿಸಲು ಲಷ್ಕರ್ ಠಾಣೆಯ ಎಎಸ್ಐ ಕೆ.ಎಸ್.ಗುರುಸ್ವಾಮಿ ಕೋರಿದ್ದಾರೆ.

ಇಂದು ವಿವಿಐಇಟಿಯಲ್ಲಿ ವಿಕಾಸ ಮಿಲನ: ಹಳೆಯ ವಿದ್ಯಾರ್ಥಿಗಳ ಸಂಗಮ

ಮೈಸೂರು: ನಗರದ ವಿದ್ಯಾ ವಿಕಾಸ್ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜಿನಲ್ಲಿ ಮೇ 9ರ ಬೆಳಗ್ಗೆ 10ಕ್ಕೆ ವಿಕಾಸ ಮಿಲನ- ಅಭಿವೃದ್ಧಿಗಾಗಿ ಮರುಮಿಲನ ಎಂಬ ಬೃಹತ್ ಹಳೆಯ ವಿದ್ಯಾರ್ಥಿಗಳ ಸಮಾವೇಶವನ್ನು ಆಯೋಜಿಸಲಾಗಿದೆ. ಕಾಲೇಜು ಆವರಣದ ಲಲಿತ ಸ್ಮಾರಕ ಭವನದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ವಿವಿಧ ವರ್ಷಗಳಲ್ಲಿ ಪದವಿ ಮುಗಿಸಿದ ವಿದ್ಯಾರ್ಥಿಗಳು ಮತ್ತೆ ಒಂದೆಡೆ ಸೇರಲಿದ್ದಾರೆ. ಐಕ್ಯೂಎಸಿ ಉಪಕ್ರಮದ ಅಡಿಯಲ್ಲಿ ನಡೆಯುತ್ತಿರುವ ಈ ಸಮಾರಂಭದಲ್ಲಿ 500 ಹೆಚ್ಚು ಹಳೆಯ ವಿದ್ಯಾರ್ಥಿಗಳು ನೇರವಾಗಿ ಮತ್ತು ಆನ್ ಲೈನ್ ಮೂಲಕ ಭಾಗವಹಿಸುವ ನಿರೀಕ್ಷೆಯಿದೆ. ಈ ಭೇಟಿಯು ಹಳೆಯ ನೆನಪುಗಳನ್ನು ಮೆಲುಕು ಹಾಕಲು, ಯಶಸ್ಸಿನ ಕಥೆಗಳನ್ನು ಹಂಚಿಕೊಳ್ಳಲು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಸಂಭ್ರಮಿಸಲು ಉತ್ತಮ ವೇದಿಕೆಯಾಗಲಿದೆ. ಈ ಸಮಾವೇಶದಲ್ಲಿ ಉದ್ಯೋಗಾವಕಾಶಗಳು, ನಾವೀನ್ಯತೆ ಮತ್ತು ಕಾಲೇಜಿನ ಸಮಗ್ರ ಅಭಿವೃದ್ಧಿಯಲ್ಲಿ ಹಳೆಯ ವಿದ್ಯಾರ್ಥಿಗಳು ಹೇಗೆ ಸಹಕರಿಸಬಹುದು ಎಂಬ ಬಗ್ಗೆ ತಜ್ಞರೊಂದಿಗೆ ಚರ್ಚೆಗಳು ನಡೆಯಲಿವೆ. ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ವಿ. ರಿತೇಶ್ ಗೌಡ, ಕಾರ್ಯದರ್ಶಿ ವಿ. ಕವೀಶ್ ಗೌಡ, ಪ್ರಾಂಶುಪಾಲ ಕರಿಬಸಪ್ಪ ಕ್ವಾಟಿಕಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ ಎಂದು ಕಾರ್ಯಕ್ರಮ ಸಂಯೋಜಕಿ ಡಾ. ಬಿಂದು ಎ.ಥಾಮಸ್ ತಿಳಿಸಿದ್ದಾರೆ.

ಕಬಿನಿ ಜಲಾಶಯ ನೀರಿನ ಮಟ್ಟ	
ಇಂದಿನ ಮಟ್ಟ	2256.25 (5.99)
ಒಳಹರಿವು	135 ಕ್ಯುಸೆಕ್
ಹೊರಹರಿವು	700 ಕ್ಯುಸೆಕ್
ಗರಿಷ್ಠ ಮಟ್ಟ	2284 ಅಡಿ



ಈ ಬಾರಿಯ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರಲು ಕಾರಣರಾದ ಮೈಸೂರು ಉತ್ತರ ವಲಯದ ಬಿಇಒ ಎಸ್. ರೇವಣ್ಣ ಅವರನ್ನು ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ. ಎಂ.ಮಹೇಶ ಚಿಕ್ಕಲ್ಲೂರು, ರಾಜ್ಯ ಉಪಾಧ್ಯಕ್ಷ ಸಾಲುಂಡಿ ದೊರೆಸ್ವಾಮಿ, ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ. ಸೋಮೇಗೌಡ, ಡಾ. ಬಸವರಾಜು ಅಭಿನಂದಿಸಿದರು.



2026ರ ಬಸವ ಜಯಂತಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಹಿನ್ನೆಲೆಯಲ್ಲಿ ಬಸವ ಬಳಗದ ಅಧ್ಯಕ್ಷ ಎಂ. ಚಂದ್ರಶೇಖರ, ಕಾರ್ಯದರ್ಶಿ ಎ.ಪಿ. ವಿರೂಪಾಕ್ಷ ಅವರನ್ನು ಜನಪರ ಸಾಹಿತ್ಯ ಪರಿಷತ್ತು ವತಿಯಿಂದ ರಾಜ್ಯಾಧ್ಯಕ್ಷ ಡಾ.ಎಂ. ಮಹೇಶ ಚಿಕ್ಕಲ್ಲೂರು, ಉಪಾಧ್ಯಕ್ಷ ಸಾಲುಂಡಿ ದೊರೆಸ್ವಾಮಿ, ಕೆ.ಬಿ. ಸೋಮೇಗೌಡ, ಡಾ. ಬಸವರಾಜು ಅಭಿನಂದಿಸಿದರು.

ಇಬ್ಬರು ಅಪರಿಚಿತರು ಸಾವು

• **ಕನ್ನಡಪ್ರಭ ವಾರ್ತೆ** ಮೈಸೂರು

ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಅಪರಿಚಿತ ವ್ಯಕ್ತಿಗಳು ಮೃತಪಟ್ಟಿರುವ ಘಟನೆ ನಗರದ ದೇವರಾಜ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದೆ. ದೇವರಾಜ ಮೊಹಲ್ಲಾ ವಿನೋಬ ರಸ್ತೆಯಲ್ಲಿರುವ ಮಧುಮನೆ- ರೋಲ್ಸ್ ಗೋಲ್ಡ್ ಶಾಪ್ ಮುಂಭಾಗದಲ್ಲಿ ಮೇ 1 ರಂದು ಕುಳುತ್ತಿದ್ದ 60 ವರ್ಷದ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದಾರೆ. ಮೃತರ ಚಹರೆ- 5.3 ಅಡಿ ಎತ್ತರ, ಬಿಳಿ ಮತ್ತು ಕಪ್ಪು ತಲೆ ಕೂದಲು, ಬಿಳಿ ಮೈಬಣ್ಣ, ಗುಂಡು ಮುಖ, ಸಾಧಾರಣ ಮೈಕಟ್ಟು, ಆಕಾಶ ನೀಲಿ ಬಣ್ಣದ ಶರ್ಟ್, ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ನಗರದ ಕೆ.ಆರ್. ವೃತ್ತದ ಟ್ರಿಣ್ ಟ್ರಿಣ್ ಸೈಕಲ್ ಸ್ಟ್ಯಾಂಡ್ ಬಳಿ 65 ವರ್ಷದ ಅಪರಿಚಿತ ವ್ಯಕ್ತಿ ಕಳೆದ ಏ.26 ರಂದು ಮೃತಪಟ್ಟಿದ್ದಾರೆ. ಮೃತರ ಚಹರೆ- ಸಾಧಾರಣ ಮೈಕಟ್ಟು, 5.3 ಅಡಿ ಎತ್ತರ, ಕೋಲು ಮುಖ, ಬಿಳಿ ಮೈಬಣ್ಣ, ಬಿಳಿ ಮತ್ತು ಕಪ್ಪು ತಲೆ ಕೂದಲು, ನೀಲಿ ಬಣ್ಣದ ಉದ್ದನೆಯ ಗೆರೆಯುಳ್ಳ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದಾರೆ. ಮೃತರ ವಾರಸುದಾರರು ಇದ್ದಲ್ಲಿ ದೂ. 0821- 2418306 ಸಂಪರ್ಕಿಸಲು ದೇವರಾಜ ಠಾಣೆಯ ಪೊಲೀಸರು ಕೋರಿದ್ದಾರೆ.

ಅರ್ಹರಿಗೆ ಗ್ಯಾರಂಟಿ ಯೋಜನೆ ತಲುಪಬೇಕು

ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅರುಣ್ ಕುಮಾರ್ | ಕೆಲವು ಜನರಿಗೆ ಗೃಹಲಕ್ಷ್ಮಿ ಹಣ ದೊರೆಯುತ್ತಿಲ್ಲ ಎಂಬ ದೂರು ಇದೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಜಿಲ್ಲೆಯ ಎಲ್ಲಾ ಅರ್ಹ ಫಲಾನುಭವಿಗಳಿಗೆ 5 ಗ್ಯಾರಂಟಿ ಯೋಜನೆಗಳ ಸೌಲಭ್ಯಗಳು ತಲುಪಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅರುಣ್ ಕುಮಾರ್ ತಿಳಿಸಿದರು.

ನಗರದ ಜಿಪಂ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು ಎಂದರು.

ಕೆಲವು ಜನರಿಗೆ ಗೃಹಲಕ್ಷ್ಮಿ ಹಣ ದೊರೆಯುತ್ತಿಲ್ಲ ಎಂಬ ದೂರು ಇದೆ ಎಂದು ಸಭೆಯಲ್ಲಿ ಕೇಳಿದಾಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರತಿಕ್ರಿಯಿಸಿ, ಯಾರು ಆದಾಯ ತೆರಿಗೆ ಪಾವತಿದಾರರು ಇದ್ದಾರೆ, ಅವರಿಗೆ ಗೃಹಲಕ್ಷ್ಮಿ ಹಣ ನೀಡಲು ನಿಯಮದಲ್ಲಿ ಅವಕಾಶವಿಲ್ಲ. ಯಾರಾದರೂ ಅರ್ಹ ಫಲಾನುಭವಿಗಳು ಇದ್ದರೆ ಪರೀಕ್ಷಿಸಿ ಸೇರ್ಪಡೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.



ಮೈಸೂರು ಜಿಪಂ ಡಿ. ದೇವರಾಜ ಅರಸು ಸಭಾಂಗಣದಲ್ಲಿ ಶುಕ್ರವಾರ ನಡೆದ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ಜಿಲ್ಲಾಧ್ಯಕ್ಷ ಅರುಣ್ ಕುಮಾರ್ ಮಾತನಾಡಿದರು.

ಬಿಪಿಎಲ್ ಕಾರ್ಡ್ ಮಾಡಿಸಲು ಪೋರ್ಟಲ್ ಓಪನ್ ಆದಾಗ ಪತ್ರಿಕಾ ಪ್ರಕಟಣೆ ನೀಡಿ ಸಾರ್ವಜನಿಕರಿಗೆ ಮಾಹಿತಿ ದೊರೆಯುವಂತೆ ಮಾಡಬೇಕು. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಬಿಪಿಎಲ್ ಕಾರ್ಡ್ ಅತ್ಯವಶ್ಯಕವಾಗಿದೆ. ಬಿಪಿಎಲ್ ಕಾರ್ಡ್ ಇಲ್ಲದೆ ಇದ್ದರೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ಹಾಗೂ ಸ್ಕ್ಯಾನಿಂಗ್ ಸೌಲಭ್ಯಗಳು ದೊರೆಯುವುದಿಲ್ಲ. ಆದ್ದರಿಂದ ಅರ್ಹರಿಗೆ ಬಿಪಿಎಲ್ ಕಾರ್ಡ್ ಗಳನ್ನು ನೀಡಲು ಕ್ರಮ ವಹಿಸುವಂತೆ ಆಹಾರ ಇಲಾಖೆಯ ಉಪ ನಿರ್ದೇಶಕರಿಗೆ ಅವರು ಸೂಚಿಸಿದರು.

ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ಆರ್‌ಓ ಘಟಕಗಳನ್ನು ಅಳವಡಿಸಿ. ಕೆಎಸ್ಆರ್‌ಟಿಸಿ ಬಸ್ ಗಳಲ್ಲಿ ಟಿಕೆಟ್ ಹಣ ಆನ್ ಲೈನ್ ನಲ್ಲೂ ಪಾವತಿ ವ್ಯವಸ್ಥೆ ಇರುವ ಬಗ್ಗೆ ಫಲಕಗಳನ್ನು ಅಳವಡಿಸಿ. ಈ ಬಗ್ಗೆ ಪ್ರಯಾಣಿಕರಿಗೆ ಮಾಹಿತಿ ನೀಡಬೇಕು. ನಿರ್ವಾಹಕರು ಪ್ರಯಾಣಿಕರೊಂದಿಗೆ ಸೌಜನ್ಯಯುತವಾಗಿ ವರ್ತಿಸಬೇಕು ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಉಪಾಧ್ಯಕ್ಷ ಶಿವಕುಮಾರ್ ಮಾತನಾಡಿ, ಯಾರು ಮರಣ ಹೊಂದಿದ್ದಾರೆ ಅವರಿಗೂ ಹಣ ಹೋಗುತ್ತಿದೆ. ಅವರಿಗೆ ಸ್ಥಗಿತಗೊಳಿಸಬೇಕು ಹಾಗೂ ಮರಣದಿಂದ ಇಲ್ಲಿಯವರೆಗೆ ಅವರಿಗೆ ಪಾವತಿ ಆಗಿರುವ ಹಣವನ್ನು ಹಿಂಪಡೆಯಬೇಕು. ಮುಂದೆ ಯಾರೇ ಫಲಾನುಭವಿ ಮರಣ ಹೊಂದಿದರೆ ಆಟೋ ಮ್ಯಾಟಿಕ್ ಆಗಿ ಹಣ ಪಾವತಿ ಸ್ಥಗಿತವಾಗುವಂತೆ ತಂತ್ರಜ್ಞಾನ ಅಳವಡಿಸಿಕೊಳ್ಳಿ ಎಂದರು.

> ಗೃಹಲಕ್ಷ್ಮಿ ಹಣವನ್ನು ಯಾವುದೇ ಬ್ಯಾಂಕ್ ನವರು ಸಾಲಕ್ಕೆ ವಜಾ ಮಾಡಿಕೊಳ್ಳದೆ ಮಾನವೀಯತೆ ಆದಾರದ ಮೇಲೆ ಫಲಾನುಭವಿಗಳಿಗೆ ನೀಡಬೇಕು. ಗೃಹಲಕ್ಷ್ಮಿ ಯೋಜನೆಯ ಫಲಾನುಭವಿ ಮರಣ ಹೊಂದಿದರೆ ಅವರಿಗೆ ಹಣ ಪಾವತಿ ಆಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು.
>
> • **ಎಸ್.ಯುಕೇಶ್ ಕುಮಾರ್** ಸಿಇಒ, ಜಿಪಂ

ಜಿಲ್ಲೆಯಲ್ಲಿ 680301 ಪಡಿತರ ಚೀಟಿಗಳು ಇವೆ. ಐಟಿ ಪಾವತಿ ಮಾಡಿರುವ ಹಾಗೂ 7.5 ಹೆಕ್ಟರ್ ಭೂಮಿ ಹೊಂದಿರುವವರ 23 ಸಾವಿರ ಕಾರ್ಡ್ ಗಳನ್ನು ಎಪಿಎಲ್ ಗೆ ಬದಲಾವಣೆ ಮಾಡಲಾಗಿದೆ ಎಂದು ಆಹಾರ ಇಲಾಖೆಯ ಉಪ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ 968228 ಫಲಾನುಭವಿಗಳು ಗೃಹ ಜ್ಯೋತಿ ಯೋಜನೆಯಡಿ ನೋಂದಣಿ ಆಗಿದ್ದಾರೆ. 6548 ಫಲಾನುಭವಿಗಳು ನೋಂದಣಿಗೆ ಬಾಕಿ ಇದ್ದಾರೆ. ಶೇ.60 ರಷ್ಟು ಫಲಾನುಭವಿಗಳಿಗೆ ಶೂನ್ಯ ಬಿಲ್ ಬರುತ್ತದೆ. ಶೇ.40 ಫಲಾನುಭವಿಗಳು ಸರಾಸರಿಗಿಂತ ಹೆಚ್ಚಿನ ವಿದ್ಯುತ್ ಬಳಕೆ ಮಾಡುವುದರಿಂದ ಬಿಲ್ ಬರುತ್ತದೆ ಎಂದು ಸೆಸ್ಕ್ ಅಧೀಕ್ಷಕ ಎಂಜಿನಿಯರ್ ಸುನಿಲ್ ವಿವರಿಸಿದರು.

ಪ್ರಾಧಿಕಾರದ ಉಪಾಧ್ಯಕ್ಷರಾದ ಹುಣಸೂರು ಬಸವಣ್ಣ, ಬಿ.ಎನ್. ಕರೀಗೌಡ, ತಾಲೂಕು ಅಧ್ಯಕ್ಷ ನಿತಿನ್ ವೆಂಕಟೇಶ್, ಸದಸ್ಯರಾದ ಸಾ.ಮಾ. ಯೋಗೇಶ್, ಎಂ.ಎಸ್. ಮಹದೇವ, ಲಲಿತಾ, ಅಬ್ದುಲ್ ಖಾದರ್, ಜಿಪಂ ಸಿಇಒ ಎಸ್. ಯುಕೇಶ್ ಕುಮಾರ್ ಮೊದಲಾದವರು ಇದ್ದರು.

ಕೋರ್ ಎಂಜಿನಿಯರಿಂಗ್ ವಿಭಾಗಗಳಿಗೆ ಮರುಜೀವ

ವಿದ್ಯುತ್ 2026-ವಾರ್ಷಿಕ ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ ನೀಡಿದ ಡಾ.ಎ.ಎನ್.ಸಂತೋಷ್ ಕುಮಾರ್ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಮೈಸೂರು

ದೇಶದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಹೆಚ್ಚುತ್ತಿರುವ ಕಾರಣ ಸಿವಿಲ್, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಅಂತಹ ಸಾಂಪ್ರದಾಯಿಕ ಎಂಜಿನಿಯರಿಂಗ್ ವಿಭಾಗಗಳು ಭರ್ಜರಿಯಾಗಿ ಮರುಜೀವ ಪಡೆಯಲಿವೆ ಎಂದು ಜೆಎಸ್ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿ ಕುಲಪತಿ ಡಾ.ಎ.ಎನ್. ಸಂತೋಷ್ ಕುಮಾರ್ ತಿಳಿಸಿದರು.

ನಗರದ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಲಾಗಿರುವ ಮೂರು ದಿನಗಳ ವಿದ್ಯುತ್ 2026- ವಾರ್ಷಿಕ ಸಾಂಸ್ಕೃತಿಕ ಹಬ್ಬವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ದಶಕದಲ್ಲಿ ಕೇವಲ ಐಟಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರಿಂದ ಈಗ ಕೋರ್ ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಪರಿಣಿತರ ಕೊರತೆ ಉಂಟಾಗಿದೆ ಎಂದರು.

ಎಐ, ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಿಕ್ ವಾಹನಗಳಂತಹ ಕ್ಷೇತ್ರಗಳು ಭವಿಷ್ಯದಲ್ಲಿ ದೊಡ್ಡ ಅವಕಾಶ ಗಳನ್ನು ಸೃಷ್ಟಿಸಲಿವೆ. ಎಐ ಬಂದ ತಕ್ಷಣ ಉದ್ಯೋಗಗಳು ನಾಶವಾಗುವುದಿಲ್ಲ ಎಂದರು.



ಪದವಿಗಳು ಮೊದಲ ಕೆಲಸ ಪಡೆಯಲು ಸಹಾಯ ಮಾಡಬಹುದು. ಆದರೆ ದೀರ್ಘಕಾಲದ ಯಶಸ್ಸು ನಮ್ಮೊಳಗಿನ ವ್ಯಕ್ತಿತ್ವ, ಮೌಲ್ಯ ಮತ್ತು ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ. ಕೇವಲ ಹಣ ಸಂಪಾದಿಸುವುದು ಅಥವಾ ಉದ್ಯೋಗ ಪಡೆಯುವುದು ಶಿಕ್ಷಣದ ನಿಜವಾದ ಉದ್ದೇಶವಲ್ಲ. ಮಾನವ ನಡವಳಿಕೆ ತಿದ್ದಿ ಉತ್ತಮ ವ್ಯಕ್ತಿತ್ವ ರೂಪಿಸುವುದೇ ಶಿಕ್ಷಣದ ಗುರಿ ಎಂದರು.

ಸಮಾಜವು ಬಾಲ್ಯದಿಂದಲೇ ಅಂಕಗಳು ಮತ್ತು ಸಂಬಳವೇ ಯಶಸ್ಸಿನ ಮಾಪನ ಎಂದು ನಂಬಿಸುತ್ತದೆ. ಆದರೆ, ಆರ್ಥಿಕ ಬೆಳವಣಿಗೆಯ ಜೊತೆಗೆ ಸಮಾಜ ವನ್ನು ಅರ್ಥಮಾಡಿಕೊಳ್ಳುವ ಮತ್ತು ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಗುಣಗಳನ್ನು ಬೆಳೆಸಿಕೊಳ್ಳುವುದು ಮುಖ್ಯ. ಸೋಷಿಯಲ್ ಮೀಡಿಯಾ ಮಾಹಿತಿಗಳನ್ನು ನೋಡಿ ತಕ್ಷಣ ಯಾವುದೇ ನಿರ್ಧಾರಕ್ಕೆ ಬರಬೇಡಿ. ವಿಮರ್ಶಾತ್ಮಕವಾಗಿ ಯೋಚಿಸಿ ಪೂರ್ಣ ಮಾಹಿತಿ ಪಡೆದ ನಂತರವೇ ಅಭಿಪ್ರಾಯ ರೂಪಿಸಿಕೊಳ್ಳಿ ಎಂದು ಅವರು ಸಲಹೆ ನೀಡಿದರು.

ಇಂದಿನ ಕಂಪನಿಗಳು ತಾಂತ್ರಿಕ ಜ್ಞಾನಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳ ನಡವಳಿಕೆ ಮತ್ತು ಮನೋ ಭಾವ ಗಮನಿಸುತ್ತವೆ. ತಾಂತ್ರಿಕ ತರಬೇತಿಯನ್ನು ಕೆಲವೇ ತಿಂಗಳುಗಳಲ್ಲಿ ನೀಡಬಹುದು. ಆದರೆ, ವ್ಯಕ್ತಿಯ ಗುಣ ಮತ್ತು ನಡವಳಿಕೆಯನ್ನು ಬದಲಾಯಿಸುವುದು ಕಷ್ಟ ಎಂದರು.

ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಬಿ. ಸದಾಶಿವೇಗೌಡ ಮಾತನಾಡಿ, ಸಂಸ್ಕೃತಿಯು ಸಮಾಜದ ಆತ್ಮವಾಗಿದ್ದು, ಪರಂಪರೆ ಮತ್ತು ಮೌಲ್ಯಗಳನ್ನು ಉಳಿಸಲು ಇಂತಹ ಕಾರ್ಯಕ್ರಮಗಳು ಸಹಕಾರಿ ಎಂದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್ ಇತರರು ಇದ್ದರು.

ಲೈಂಗಿಕ ಅಲ್ಪಸಂಖ್ಯಾತ ವ್ಯಕ್ತಿಗಳ ಹಕ್ಕು ರಕ್ಷಣೆ ಮಸೂದೆಗೆ ವಿರೋಧ

• **ಕನ್ನಡಪ್ರಭ ವಾರ್ತೆ** ಮೈಸೂರು

ಕೇಂದ್ರ ಸರ್ಕಾರದ ಲೈಂಗಿಕ ಅಲ್ಪಸಂಖ್ಯಾತ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಯು ಈ ಸಮುದಾಯದವರ ಹಕ್ಕುಗಳಿಗೆ ಗಂಭೀರ ಹಾನಿಯುಂಟು ಮಾಡುವುದರಿಂದ ಅದನ್ನು ವಿರೋಧಿಸುವುದಾಗಿ ರಾಜ್ಯ ಮಟ್ಟದ ಸಮುದಾಯದ ಸಂಘಟನೆಗಳ ಒಕ್ಕೂಟದ ಪದಾಧಿಕಾರಿ ಪೃಥ್ವಿ ಸ್ಪಷ್ಟಪಡಿಸಿದರು.

ಈ ಮಸೂದೆ ಈಗಾಗಲೇ ಇರುವ ಸಮಾನತೆ, ಗೌರವ ಮತ್ತು ಸ್ವಯಂ ಗುರುತಿನ ಹಕ್ಕನ್ನು ದುರ್ಬಲಗೊಳಿಸುವ ಯತ್ನವಾಗಿದೆ. ಲಿಂಗ ಗುರುತಿಗೆ ವೈದ್ಯಕೀಯ ಪರಿಶೀಲನೆ ಮತ್ತು ಪ್ರಮಾಣಪತ್ರದ ಮೂಲಕ ಮಾತ್ರ ಮಾನ್ಯಗೊಳಿಸುವ ವ್ಯವಸ್ಥೆ ಬೇಕು ಎಂದು ತಿಳಿಸಿದೆ. ಆದರೆ ಈ ಹಿಂದಿನ ಸುಪ್ರೀಂಕೋರ್ಟ್ ತೀರ್ಪಿನ ಅಡಿಯಲ್ಲಿನ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಲಿಂಗ ಗುರುತನ್ನು ಸ್ವಯಂ ನಿರ್ಧರಿಸುವ ಹಕ್ಕು ಇದೆ, ಯಾವುದೇ ವೈದ್ಯಕೀಯ ಅಥವಾ ಆಡಳಿತಾತ್ಮಕ ಅನುಮತಿ ಅಗತ್ಯವಿಲ್ಲ ಎಂಬ ಅಂಶಕ್ಕೆ ವಿರುದ್ಧವಾದುದು ಎಂದರು.

ಅಲ್ಲದೇ, ಮಸೂದೆಯಲ್ಲಿ ಟ್ರಾನ್ಸ್ ಜೆಂಡರ್ ಎಂಬ ಪದಕ್ಕೆ ಸೀಮಿತ ಮತ್ತು ತಪ್ಪಾದ ವ್ಯಾಖ್ಯಾನ ನೀಡಲಾಗಿದೆ. ಹಲವಾರು ಲಿಂಗ ವೈವಿಧ್ಯತೆಯ ಗುರುತನ್ನು ಹೊರತು ಪಡಿಸಲಾಗಿದೆ. ಇದೇ ರೀತಿಯ ಹಲವಾರು ಲೋಪಗಳಿರುವ ಕಾರಣ ಮಸೂದೆಯನ್ನು ವಿರೋಧಿಸುವುದಾಗಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಟಿ. ಶಿವರಾಮು, ಬಿ.ಎಚ್.ಮಂಜುನಾಥ್ ಮೊದಲಾದವರು ಇದ್ದರು.

10ಕ್ಕೆ ದೊಡ್ಡೋರ ಧ್ವನಿ ಸಂಗೀತ ಸಂಜೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಡಾ.ರಾಜ್ ಕುಮಾರ್ ಮ್ಯೂಸಿಕಲ್ ಗ್ರೂಪ್ ನಿಂದ ಮೇ 10ರಂದು ಸಂಜೆ 5ಕ್ಕೆ ಪುರಭವನದಲ್ಲಿ ಡಾ. ರಾಜ್ ಕುಮಾರ್ ಸವಿನೆನಪಿನಲ್ಲಿ ದೊಡ್ಡೋರ ಧ್ವನಿ ಶೀರ್ಷಿಕೆಯ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥಾಪಕ ಅಧ್ಯಕ್ಷ ಮೈಸೂರು ಜಯರಾಂ ತಿಳಿಸಿದರು.

ಕಾರ್ಯಕ್ರಮದಲ್ಲಿ ತಮ್ಮೊಡನೆ ಗಂಗೋತ್ರಿಕುಮಾರ್, ನಾಗೇಂದ್ರ, ನಂಜುಂಡಯ್ಯ, ಅಶ್ವಿನಿ, ತೇಜಸ್ವಿನಿ ಮೊದಲಾದವರು ಹಾಡಲಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹೆಬ್ಬಾಳು ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಪ್ರೊ. ಭಾಷ್ಯಂ ಸ್ವಾಮೀಜಿ ಸಾನ್ನಿಧ್ಯವಹಿಸುವರು. ಎಂಡಿಎ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್. ರಘು, ಮಾಜಿ ಶಾಸಕ ಎಸ್. ಬಾಲರಾಜ್, ಮೈಸೂರು ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಜಿ. ಹರೀಶ್, ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ್ ವಿ. ಬೈರಿ, ಕೆ. ರಘುರಾಂ ವಾಜಪೇಯಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಡಾ. ವೈ.ಡಿ. ರಾಜಣ್ಣ, ಕೆ.ಎಸ್. ದೇವಪ್ರಕಾಶ್ ಮೊದಲಾದವರು ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಎಡೆಯೂರು ಸಮೀವುಲ್ಲಾ, ಲತಾ ಬಾಲಕೃಷ್ಣ ಇದ್ದರು.

ಚಿನ್ನತಂಬಿ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಒಡವೆ ಗಿರವಿ ಇರಿಸಿಕೊಂಡು ಕರಗಿಸಿ ಅಥವಾ ಇನ್ನಿತರರಿಗೆ ಮಾರಾಟ ಮಾಡಿ ಬಹುದೊಡ್ಡ ವಂಚನೆ ಎಸಗಿರುವ ಗೋಲ್ಡ್ ಕಂಪನಿಯೊಂದರ ಚಿನ್ನತಂಬಿ ಎಂಬಾತನ ವಿರುದ್ಧ ಪೊಲೀಸರು ಮೃದುಧೋರಣೆ ತಾಳಿದ್ದಾರೆ ಎಂದು ಸಂಯುಕ್ತ ಜನತಾದಳ ರಾಜ್ಯ ಉಪಾಧ್ಯಕ್ಷ ಕೆ.ವಿ.ಶಿವರಾಮ್ ಆರೋಪಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಡಿಮೆ ಬಡ್ಡಿಗೆ ಗಿರವಿ ಇರಿಸಿಕೊಳ್ಳುವುದಾಗಿ ನಂಬಿಸಿ ಈತ ನೂರಾರು ಮಂದಿಗೆ ವಂಚಿಸಿದ್ದಾನೆ. ಹಲವಾರು ಕಂಪನಿ ಹೆಸರಿನಲ್ಲಿ ಈ ಅಕ್ರಮ ಎಸಗಿದ್ದಾನೆ. ಪ್ರಶ್ನಿಸಲು ಹೋದ ಗ್ರಾಹಕರಿಗೆ ಗೂಂಡಾಗಳನ್ನು ಬಳಸಿಕೊಂಡು ಬೆದರಿಕೆ ಹಾಕುತ್ತಿದ್ದಾನೆ ಎಂದು ದೂರಿದರು.

ಈಚೆಗೆ ಸಿಸಿಬಿ ಪೊಲೀಸರು ಈತನನ್ನು ನೆಪಮಾತ್ರಕ್ಕಷ್ಟೇ ಬಂಧಿಸಿದ್ದಾರೆ. ಈತನ ಕಂಪನಿಯಲ್ಲಿ ಹಣ ಕೇಳಲು ಹೋದ ಮಹಿಳೆಯರ ಮೇಲೆ ಹಲ್ಲೆ ನಡೆಸಿದ್ದು, ಇದರ ಬಗ್ಗೆ ಯಾವುದೇ ಪ್ರಕರಣವನ್ನು ಪೊಲೀಸರು ದಾಖಲಿಸದೆ, ಕೇವಲ ವಂಚನೆ ಪ್ರಕರಣವನ್ನು ಮಾತ್ರ ದಾಖಲಿಸಿದ್ದಾರೆ. ಅಂದರೆ ಆತನನ್ನು ರಕ್ಷಿಸುವ ಉದ್ದೇಶ ಪೊಲೀಸರಿಗಿದೆ ಎಂದು ದೂರಿದರು.

ಇದರೊಡನೆ ಪ್ರಕರಣ ಮುಚ್ಚಿ ಹಾಕುವ ಯತ್ನ ನಡೆಸುತ್ತಿದ್ದಾರೆ. ಬೆದರಿಕೆ ಹಾಕುತ್ತಿದ್ದರೂ ಕೊಲೆ ಬೆದರಿಕೆ ಪ್ರಕರಣ ದಾಖಲಿಸದೇ ಕೇವಲ ವಂಚನೆ ಪ್ರಕರಣ ದಾಖಲಿಸಿದ್ದಾರೆ. ಇದು ಸರಿಯಲ್ಲ. ಹೀಗಾಗಿ ಜೆಡಿಯು ವತಿಯಿಂದ ಜಿಲ್ಲಾಧಿಕಾರಿಗೆ ದೂರು ನೀಡಿ ಕ್ರಮಕ್ಕೆ ಮೊರೆ ಹೋಗಲಾಗುವುದು. ಸರ್ಕಾರ ಕೂಡ ಇಂತಹ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು. ಪದಾಧಿಕಾರಿಗಳಾದ ಕೆ.ಆರ್. ರಂಗನಾಥ್, ಕಲ್ಪನಗೌಡ, ವಿಜಯಲಕ್ಷ್ಮೀ, ಕೆ.ಎಂ. ಪಾಲಾಕ್ಷ ಇದ್ದರು.

ನಗರ ಕಾರ್ಯಕ್ರಮ

9.5.2026, ಶನಿವಾರ

- **ಅಂಬೇಡ್ಕರ್ ಸಾಹಿತ್ಯ ಅಕಾಡೆಮಿ, ಗ್ರಾಮ್ಯಾಕ್ಸ್ ಡೆವಲಪರ್ಸ್:** ದ ಬುದ್ಧ ಫೆಸ್ಟ್- 2026, ಬುದ್ಧ ಪ್ರಜ್ಞಾ ಕಾರ್ಯಕ್ರಮ, ಎಚ್.ಡಿ. ಕೋಟೆ ರಸ್ತೆ, ಉದ್ಬೂರು ಗೇಟ್, ವಿಷ್ಣು ಸ್ಮಾರಕ, ಬೆಳಗ್ಗೆ 8 ರಿಂದ ಸಂಜೆ 5.
- **ಜೆಎಸ್ಎಸ್ ಎಸ್‌ಟಿಯು:** ರಾಷ್ಟ್ರ ಮಟ್ಟದ ಇಸಿ ಹ್ಯಾಕಥಾನ್, ಎಸ್‌ಜೆಸಿಇ ಆವರಣ.
- **ಶ್ರೀ ಸುಶಮೀಂದ್ರ ಸೇವಾ ಪ್ರತಿಷ್ಠಾನ:** ಕ್ರಿಕೆಟ್ ಪಂದ್ಯಾವಳಿ ಉದ್ಘಾಟನೆ- ಎಂ.ಆರ್. ಸುರೇಶ್, ಅಧ್ಯಕ್ಷತೆ- ನಂ. ಶ್ರೀಕಂಠಕುಮಾರ್, ಮುಖ್ಯಅತಿಥಿ- ರಾಜೇಶ್ ಬೋರೆ, ರೈಲ್ವೆ ಮೈದಾನ, ಬೆಳಗ್ಗೆ 8.30. ಸಮಾರೋಪ, ಬಹುಮಾನ ವಿತರಣೆ-ಶಾಸಕ ಟಿ.ಎಸ್. ಶ್ರೀವತ್ಸ, ಅತಿಥಿ- ಡಾ.ಕೆ. ರಾಘವೇಂದ್ರ ಪೈ, ಸನ್ಮಾನಿತರು- ಶುಭಾ ಸತೀಶ್, ಸಂಜೆ 4.
- **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ:** ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಚರ್ಮ ಆರೈಕೆ ಮತ್ತು ಡಿಟಾಕ್ಸಿಫಿಕೇಶನ್ ಯೋಗ ಶಿಬಿರ, ಮಧುಮೇಹ ಗಾಯಗಳು, ಅರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ ಸಂಜೆ 4.30.
- **ರಾಮಸನ್ಸ್ ಬೊಂಬೆಮನೆ:** ಕ್ರೀಡಾ ಕೌಶಲ್ಯ- ಹಾಸು ಆಟಗಳ ಪ್ರದರ್ಶನ, ಮಾರಾಟ, ನಜರಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7.
- **ಸುಯೋಗ್ ಆಸ್ಪತ್ರೆ:** ಉಚಿತ ಕೀಲುಮೂಳೆ ತಪಾಸಣೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ ಸಂಜೆ 6.
- **ವಿದ್ಯಾವರ್ಧಕ ಕಾನೂನು ಕಾಲೇಜು:** ಎನ್. ನಂಜೇಗೌಡ ಸ್ಮರಣಾರ್ಥ ಧತ್ತಿ ಉಪನ್ಯಾಸ- ಪ್ರೊ.ಟಿ. ರಾಮಕೃಷ್ಣ, ಮುಖ್ಯಅತಿಥಿ- ಪ್ರೊ. ಕೆ.ಎಸ್. ರಂಗಪ್ಪ, ಅಧಅಯಕ್ಷತೆ- ಗುಂಡಪ್ಪಗೌಡ, ಅತಿಥಿಗಳು- ಪಿ. ವಿಶ್ವನಾಥ್, ಎಸ್. ಶಿವಲಿಂಗಯ್ಯ, ಶ್ರೀಶೈಲ ರಾಮಣ್ಣನವರ್, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಗ್ಗೆ 10.
- **ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ:** ಕುವೆಂಪು ಶೈಕ್ಷಣಿಕ ಚಿಂತನೆಗಳು- ವಿಚಾರಗೋಷ್ಠಿ, ಉದ್ಘಾಟನೆ- ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ- ಕೊಟ್ರೇಶ್ ಎಸ್. ಉಪ್ಪಾರ್, ವಿಚಾರ ಮಂಡನೆ- ಡಾ.ಉಮೇಶ್ ಬೇವಿನಹಳ್ಳಿ, ಆಶಯ ಭಾಷಣ- ಟಿ. ಸತೀಶ್ ಜವರೇಗೌಡ, ಉಪಸ್ಥಿತಿ- ಅಂತೋಣಿ ಪೌಲ್ ರಾಜ್, ವಾಸು ಸಮುದ್ರವಳ್ಳಿ, ಬಸಪ್ಪ ಸಿ. ಸಾಲುಂಡಿ, ರಾಜೇಂದ್ರ ನಗರ, ಛಾಯಾದೇವಿ ಬಿ. ಇಡಿ ಕಾಲೇಜು, ಬೆಳಗ್ಗೆ 10.30
- **ಜೆಎಸ್ಎಸ್ ನರ್ಸಿಂಗ್ ಕಾಲೇಜು:** ಪ್ರತಿಜ್ಞಾವಿಧಿ ಸ್ವೀಕಾರ, ಮುಖ್ಯಅತಿಥಿ- ಆರ್. ಐಶ್ವರ್ಯ, ಡಾ.ಪ್ರತಿಭಾ ಸ್ವಾಮಿ, ಅಧ್ಯಕ್ಷತೆ- ಆರ್. ಮಹೇಶ್, ಜೆಎಸ್ಎಸ್ ಆಸ್ಪತ್ರೆ, ರಾಜೇಂದ್ರ ಶತಮಾನೋತ್ಸವ ಭವನ, ಬೆಳಗ್ಗೆ 11.
- **ಕಲಾಸುರಚಿ, ಕುತೂಹಲಿ:** ಸೈನ್ಸ್ ಸಂಜೆ- ಡಾ. ಲತಾ ದಿವಾಕರ್, ಕುವೆಂಪುನಗರ, ಚಿತ್ರಭಾನು ರಸ್ತೆ, ಸುರಚಿ ರಂಗಮನೆ, ಸಂಜೆ 6.30.

ಸಾಂಸ್ಕೃತಿಕ

- **ನಟನ ರಂಗಶಾಲೆ:** ರಜಾಮಜಾ- ಬೇಸಿಗೆ ಶಿಬಿರದ ಸಮಾರೋಪ, ಭಾಗವಹಿಸುವವರು- ಅವಿನಾಶ್, ಅಕ್ಕೈ ಪದ್ಮಶಾಲಿ, ನವೀನ್ ಕೃಷ್ಣ, ಮಂಡ್ಯ ರಮೇಶ್, ಕೃಷ್ಣಮೂರ್ತಿಪುರಂ, ಶಾರದಾವಿಲಾಸ ಶತಮಾನೋತ್ಸವ ಭವನ, ಮಧ್ಯಾಹ್ನ 3.30.
- **ಕಲಾ ಸಂವಾಹನ ಟ್ರಸ್ಟ್:** ಸಿತಾರ್ ಸಂಭ್ರಮ ಉದ್ಘಾಟನೆ- ಸಿಎಂ ಸಿದ್ದರಾಮಯ್ಯ, ಅಧ್ಯಕ್ಷತೆ- ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಸಾನ್ನಿಧ್ಯ- ಚಿನ್ಮಯ ಮಿಷನ್ ಸ್ವಾಮಿ ಕೃತಾತ್ಮಾನಂದಜಿ, ಮುಖ್ಯ ಅತಿಥಿಗಳು- ಎಚ್. ಆರ್. ಲೀಲಾವತಿ, ಎಂ. ಜಗನ್ನಾಥ ಶೆಣೈ, ಉಪಸ್ಥಿತಿ- ಪಂ.ವೆಂಕಟೇಶಕುಮಾರ್, ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಾಜೇಶ್ವರಿ ವಸ್ತ್ರದ, ಮೊಹಸಿನ್ ಖಾನ್, ವಿನೋಬ ರಸ್ತೆ, ಕಲಾಮಂದಿರ, ಸಂಜೆ 5.
- **ಬ್ರಹ್ಮವಿದ್ಯಾ:** ಡಾ.ರಾ. ಸತ್ಯನಾರಾಯಣ ಜನ್ಮ ಶತಮಾನೋತ್ಸವ, ಉದ್ಘಾಟನೆ- ಡಾ. ಅಹಲ್ಯಾ ಶರ್ಮ, ಭಾಗವಹಿಸುವವರು- ಡಾ. ವಿಜಯಶಂಕರ್ ಶುಕ್ಲಾ, ಶ್ರೀಕೃಷ್ಣದೇವರಾಯ, ಸವಿತಾ ಸುಲಗೋಡು, ಗೋ. ಮಧುಸೂದನ್, ಟಿ.ಎಸ್. ಸುಬ್ರಹ್ಮಣ್ಯ, ಅಧ್ಯಕ್ಷತೆ- ಡಾ.ರಾ. ವಿಶ್ವೇಶ್ವರನ್, ಮಾನಸ ಗಂಗೋತ್ರಿ, ಸೆನೆಟ್ ಭವನ, ಸಂಜೆ 5.30.
- **ಸುರಭಿ ಗಾನಕಲಾ ಮಂದಿರ ಚಾರಿಟಬಲ್ ಟ್ರಸ್ಟ್:** ಸಂಗೀತ ಕಾರ್ಯಕ್ರಮ, ಗಾಯನ- ಎಂ.ಕೆ. ತೇಜಸ್ವಿನಿ, ಪಿಟೀಲು- ಮತ್ತೂರು ಶ್ರೀನಿಧಿ, ಮೃದಂಗ- ಎನ್.ಕೆ. ಶಶಿಭೂಷಣ್, ಪ್ರಜ್ವಲ್ ಭಾರದ್ವಾಜ್, ವಿಶೇಷ ಆಹ್ವಾನಿತರು- ಕೋವಿಲಡಿ ಆರ್. ಕಲಾ, ಆರ್. ವಾಸುದೇವ ಭಟ್, ಕೃಷ್ಣಮೂರ್ತಿಪುರಂ, ಬಿಎಸ್ಎಸ್ ವಿದ್ಯೋದಯ, ಸಂಜೆ 5.30.

ಧಾರ್ಮಿಕ

- **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಮಹಾಮೇಧಾನಂದಜಿ ಅವರಿಂದ ಉಪನ್ಯಾಸ, ಯಾದವಗಿರಿ, ಸಂಜೆ 6.

ಕೆ-ಸೆಟ್, ಯುಜಿಸಿ-ನೆಟ್ ಪರೀಕ್ಷಾ ತರಬೇತಿ ಶಿಬಿರ ಉದ್ಘಾಟನೆ 12ಕ್ಕೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವು ಕೆ-ಸೆಟ್ ಮತ್ತು ಯುಜಿಸಿ-ನೆಟ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನದ ತರಬೇತಿ ಶಿಬಿರವನ್ನು ಮೇ 12ರ ಬೆಳಗ್ಗೆ 11ಕ್ಕೆ ಕಾವೇರಿ ಸಭಾಂಗಣದಲ್ಲಿ ಬೆಂಗಳೂರು ಉತ್ತರ ವಿವಿ ಕುಲಪತಿ ಪ್ರೊ.ಬಿ.ಕೆ.ರವಿ ಉದ್ಘಾಟಿಸುವರು.





ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಜಂಟಿ ನಿರ್ದೇಶಕಿ ಆರ್. ಸತ್ಯಶ್ರೀ ಅವರು ತರಬೇತಿ ಶಿಬಿರಾರ್ಥಿಗಳಿಗೆ ಶುಭ ಹಾರೈಸಿ ಮುಖ್ಯ ಭಾಷಣ ಮಾಡುವರು. ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸುವರು. ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಪರೀಕ್ಷಾಂಗ ಕುಲಸಚಿವ ಡಾ.ಸಿ.ಎಸ್.ಆನಂದಕುಮಾರ್, ಶೈಕ್ಷಣಿಕ ಡೀನ್ ಪ್ರೊ.ಎಂ.ರಮಾನಾಥಂ ನಾಯ್ಡು, ಅಧ್ಯಯನ ಕೇಂದ್ರದ ಡೀನ್ ಡಾ.ಎನ್.ಆರ್.ಚಂದ್ರೇಗೌಡ, ಹಣಕಾಸು ಅಧಿಕಾರಿ ಡಾ.ಎಸ್.ನಿರಂಜನ್ ರಾಜ್ ಉಪಸ್ಥಿತರಿರುವರು. ತರಬೇತಿಗೆ ಸೇರ ಬಯಸುವ ಆಸಕ್ತರು ಈಗಲೂ ಪ್ರವೇಶಾತಿ ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ದೂ. 0821- 2515944, 99647 60090 ಸಂಪರ್ಕಿಸಬಹುದು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

ಸುದ್ದಿ ಸಿಂಚನ

ರೈತರಿಗೆ ಹವಾಮಾನ ಇಲಾಖೆಯಿಂದ ಸಲಹೆ

ಮೈಸೂರು: ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯಂತೆ ಮೇ 9 ರಿಂದ 13 ರವರೆಗೆ ಜಿಲ್ಲೆಯಲ್ಲಿ ತುಂತುರು ಮಳೆ ಬರುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಗರಿಷ್ಠ ಉಷ್ಣಾಂಶ 33 ರಿಂದ 34 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಟ 23 - 24 ರವರೆಗೆ ದಾಖಲಾಗುವ ಸಾಧ್ಯತೆ ಇದೆ. ಬಾಳೆ ಹಣ್ಣಿನ ಬೆಳವಣಿಗೆ, ಎಲೆಕೋಸು ಮತ್ತು ಹೂ ಕೋಸು, ಕಬ್ಬು, ತರಕಾರಿ ಬೆಳೆಗಳು, ಟೊಮೆಟೋ, ತೆಂಗಿನಕಾಯಿ, ಅಡಿಕೆ, ಹೆಸರು, ಅಲಸಂದೆ ಮತ್ತು ಉದ್ದು ಮುಂತಾದ ಬೆಳೆಗೆ ವಿವಿಧ ರೋಗ ಕಾಡುವ ಸಾಧ್ಯತೆ ಇದೆ. ರೈತರು ಹೆಚ್ಚಿನ ಮಾಹಿತಿಗೆ ಹಿರಿಯ ಕ್ಷೇತ್ರ ಅಧೀಕ್ಷಕರು ಡಾ.ಎನ್. ಉಮಾಶಂಕರ್‌ಕುಮಾರ್ ಮತ್ತು ತಾಂತ್ರಿಕ ಅಧಿ ಕಾರಿ ಡಾ.ಜಿ.ವಿ.ಸುಮಂತ್ ಕುಮಾರ್ ಮೊ.0821-2591267, ಮೊ. 95353 45814 ಸಂಪರ್ಕಿಸಬಹುದು.

ಶೇಷಾದ್ರಿಪುರಂ ಕಾಲೇಜಿನಲ್ಲಿ ಡಿಪ್ಲೊಮಾ ಸಿಇಟಿ ತರಬೇತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಡಿಪ್ಲೊಮಾ ಬಳಿಕ ಎಂಜಿನಿಯರಿಂಗ್ ಪದವಿ ಪಡೆಯುವುದರಿಂದ ವಿಶೇಷ ಉದ್ಯೋಗಾವಕಾಶವಿದೆ. ಈ ಹಿನ್ನೆಲೆಯಲ್ಲಿ ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಉಚಿತ ಡಿಪ್ಲೊಮಾ ಸಿಇಟಿ ತರಬೇತಿ ಆಯೋಜಿಸಲಾಗಿದೆ. ಎಂಜಿನಿಯರಿಂಗ್ ಶಿಕ್ಷಣ ಪಡೆಯಲಿಚ್ಛಿಸುವ ಡಿಪ್ಲೊಮಾ ಕೊನೆ ವರ್ಷದ ಅಭ್ಯರ್ಥಿಗಳು ಹಾಗೂ ಈಗಾಗಲೇ ಈ ವಿದ್ಯಾಭ್ಯಾಸ ಪೂರ್ಣಗೊಳಿಸಿ ಉದ್ಯೋಗದಲ್ಲಿರುವವರು ಎಂಜಿನಿಯರಿಂಗ್ ಮಾಡುವ ನಿಟ್ಟಿನಲ್ಲಿ ನೆರವಾಗುವ ಉದ್ದೇಶದಿಂದ ಶೇಷಾದ್ರಿಪುರಂ ತಾಂತ್ರಿಕ ಕಾಲೇಜಿನಲ್ಲಿ ಮೇ 11 ರಿಂದ 15 ರವರೆಗೆ ಡಿಸಿಇಟಿ ತರಬೇತಿ ತರಗತಿ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಕೆ. ಪ್ರಹ್ಲಾದರಾವ್ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು. ಡಿಪ್ಲೊಮಾ ನಂತರದ ಎಂಜಿನಿಯರಿಂಗ್ ಮಾಡುವುದರಿಂದ ವಿಶೇಷ ಉದ್ಯೋಗಾವಕಾಶ, ಹೆಚ್ಚಿನ ವೇತನ ಮತ್ತು ಎಂಜಿನಿಯರಿಂಗ್ ಕುರಿತು ಆಳವಾದ ಜ್ಞಾನ ದೊರೆಯಲಿದೆ. ಆದರೆ ಎಂಜಿನಿಯರಿಂಗ್ ಪ್ರವೇಶ ಪಡೆಯಲು ಡಿಸಿಇಟಿಗೆ ಹಾಜರಾಗುವುದು ಅತ್ಯಗತ್ಯ. ಹೀಗಾಗಿ ಇವರಿಗೆ ಈ ತರಬೇತಿ ಆಯೋಜಿಸಿದ್ದು, ಇದು ಸಂಪೂರ್ಣ ಉಚಿತವಾದುದು. ಹೆಚ್ಚಿನ ಮಾಹಿತಿಗೆ ಮೊ. 96064 96400 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಟಿ. ವೆಂಕಟೇಗೌಡ, ಪ್ರೊ. ಹೇಮಂತ್ ಕುಮಾರ್ ಸೇರಿದಂತೆ ಇತರರು ಇದ್ದರು.

ನಿಂಬೆ ಬೆಳೆಗಳಲ್ಲಿ ಹೆಚ್ಚಿನ ಇಳುವರಿಗೆ 'ಅರ್ಕಾ ಸಿಟ್ರಸ್ ಸ್ಪೆಷಲ್' ಬಳಸಿ

ಗುಣಮಟ್ಟದ ಬೆಳೆ, ಸಮಗ್ರ ಪೋಷಕಾಂಶಗಳ ನಿರ್ವಹಣೆ | ಬೆಳೆಗಳಿಗೆ ಸಮತೋಲನವಾದ ಲಘು ಪೋಷಕಾಂಶಗಳನ್ನು ಒದಗಿಸುವುದು ಅಗತ್ಯ

• **ಬಿ.ಶೇಖರ್ ಗೋಪಿನಾಥಂ**
ಕನ್ನಡಪ್ರಭ ವಾರ್ತೆ ಮೈಸೂರು

ನಿಂಬೆ ಹಾಗೂ ನಿಂಬೆ ಜಾತಿಯ ಬೆಳೆಗಳಲ್ಲಿ ರೋಗ ನಿರೋಧಕ ಶಕ್ತಿಯೊಂದಿಗೆ ಬೆಳೆಯು ಆರೋಗ್ಯಕವಾಗಿ ಬೆಳೆದು ಹೆಚ್ಚಿನ ಇಳುವರಿ ನೀಡಬೇಕಾದರೆ ಬೆಳೆಗಳಿಗೆ ಸಮತೋಲನವಾದ ಲಘು ಪೋಷಕಾಂಶಗಳನ್ನು ಒದಗಿಸುವುದು ಅಗತ್ಯ.

ಮಣ್ಣಿನಲ್ಲಿ ಸಾವಯವ ಅಂಶದ ಕೊರತೆ, ರಸಗೊಬ್ಬರಗಳ ಹೆಚ್ಚು ಬಳಕೆ, ಹೆಚ್ಚು ಇಳುವರಿ ನೀಡುವ ಬೆಳೆಗಳ ತಳಿಗಳು, ಹೈಬ್ರಿಡ್ ಹಾಗೂ ಅಂಗಾಂಶ ಕೃಷಿಯಿಂದ ಅಭಿವೃದ್ಧಿಗೊಳಿಸಿದ ಬೆಳೆಗಳನ್ನು ಬೆಳೆಯುವುದರಿಂದಾಗಿ ಮಣ್ಣಿಗೆ ಲಘು ಪೋಷಕಾಂಶಗಳ ಅವಶ್ಯಕತೆ ಹೆಚ್ಚಾಗುತ್ತಿದೆ.

ಹಾಗೆಯೇ ಕ್ಷೀಣಿಸುತ್ತಿರುವ ಮಣ್ಣಿನ ಗುಣಮಟ್ಟದಿಂದಾಗಿ ಲಘು ಪೋಷಕಾಂಶಗಳನ್ನು ಮಣ್ಣಿಗೆ ನೀಡಿದರೂ ಬೆಳೆಗಳಿಗೆ ಅವು ಲಭ್ಯವಾಗುವುದು ನಿಧಾನವಾಗುತ್ತಿದೆ. ಹೀಗಾಗಿ, ಗುಣಮಟ್ಟದ ಬೆಳೆ ಹಾಗೂ ಹೆಚ್ಚಿನ ಇಳುವರಿಗಾಗಿ ಸಮಗ್ರ ಪೋಷಕಾಂಶಗಳ ನಿರ್ವಹಣೆಗಾಗಿ ನಿಂಬೆ ಹಾಗೂ ನಿಂಬೆ ಜಾತಿಯ ಬೆಳೆಯ ಎಲೆಗಳಿಗೆ ಸಿಂಪಡಿಸಬಹುದಾದ ಅರ್ಕಾ ಸಿಟ್ರಸ್ ಸ್ಪೆಷಲ್ ಅತ್ಯಂತ ಉಪಯುಕ್ತವಾಗಿದೆ.



ಬಳಕೆಯ ವಿಧಾನ: 75 ಗ್ರಾಂ ಸಿಟ್ರಸ್ ಸ್ಪೆಷಲ್+1 ಶ್ಯಾಂಪೂ ಸ್ಯಾಚೆಟ್ + 2 ನಿಂಬೆ ಹಣ್ಣಿನ ರಸವನ್ನು 15 ಲೀಟರ್‌ನೀರಿನಲ್ಲಿ ಮಿಶ್ರಣ ಮಾಡಿ ಸಿಂಪಡಿಸಬೇಕು. ಹೂ ಬಿಡುವ ಮೊದಲು ಹಾಗೂ ಕಾಯಿ ಕಚ್ಚಿದ ನಂತರ ಪ್ರತಿ ತಿಂಗಳಿಗೊಮ್ಮೆ ಕೊಯ್ಲು ಮಾಡುವ ಒಂದು ತಿಂಗಳಿನ ಮೊದಲಿನವರೆಗೂ ಸಿಂಪರಣೆ ಮಾಡಬೇಕು.

ಈ ಸಿಂಪರಣೆಯನ್ನು ಬೆಳಗ್ಗೆ ಸೂರ್ಯ ಪ್ರಖರವಾಗುವ ಮೊದಲು ಎಲೆಗಳ ಕೆಳ ಮತ್ತು ಮೇಲ್ಭಾಗ ಹಾಗೂ ಕಾಯಿಗಳಿಗೆ ಸಿಂಪಡಿಸಿದಲ್ಲಿ ಹೆಚ್ಚು ಲಾಭದಾಯಕ. ಅರ್ಕಾ ಸಿಟ್ರಸ್ ಸ್ಪೆಷಲ್ ಅನ್ನು ಇತರೆ ಕೀಟ, ಶಿಲೀಂಧ್ರ, ಬ್ಯಾಕ್ಟೀರಿಯಾ ನಾಶಕ ಹಾಗೂ ಇತ್ಯಾದಿಯೊಂದಿಗೆ ಮಿಶ್ರ ಮಾಡಿ ಸಿಂಪಡಿಸಬಾರದು.

ಅರ್ಕಾ ಸಿಟ್ರಸ್ ಸ್ಪೆಷಲ್ ಸಿಂಪರಣೆಯಿಂದ ಲಘು ಪೋಷಕಾಂಶದ ಕೊರತೆ ಬಹು ಬೇಗನೆ ನೀಗುವುದು, ಕಡಿಮೆ ರಸಗೊಬ್ಬರದ ಬಳಕೆ, ಹಣ್ಣುಗಳ ಶೀಘ್ರ ಬೆಳವಣಿಗೆ, ಹೆಚ್ಚಿನ ಗೊಂಚಲು ಹಾಗೂ ಆಕರ್ಷಕ ಬಣ್ಣ ಪಡೆಯಬಹುದು ಎಂದು ಮೈಸೂರು ತಾಲೂಕು ನಾಗನಹಳ್ಳಿಯ ವಿಸ್ತರಣಾ ಶಿಕ್ಷಣಾ ಘಟಕ, ಸಾವಯವ ಕೃಷಿ ಸಂಶೋಧನಾ ಕೇಂದ್ರದ ತೋಟಗಾರಿಕೆ ಸಹಾಯಕ ಪ್ರಾಧ್ಯಾಪಕ ಡಾ. ಶಿವಕುಮಾರ್‌ತಿಳಿಸಿದ್ದಾರೆ.

ರೈತರು ಹೆಚ್ಚಿನ ಮಾಹಿತಿಗಾಗಿ ಮೊ. 96328 59590 ಸಂಪರ್ಕಿಸಬಹುದು.

ಆರೋಗ್ಯ, ಸಂಸ್ಕೃತಿ ಕಾಪಾಡುವ ಪ್ರಯತ್ನ ಅನನ್ಯ

ಜೆಸಿಎಸಿಯಲ್ಲಿ ಚರಕದ ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟ | ಕೊಡು–ಕೊಳ್ಳುವವರ ಸಮಾವೇಶಕ್ಕೆ ಸುತ್ತೂರುಶ್ರೀ ಚಾಲನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಭಾರತೀಯ ಸಂಸ್ಕೃತಿಯಲ್ಲಿ ಹಲವಾರು ಆಚರಣೆಗಳಿದ್ದು, ಅವುಗಳಲ್ಲಿ ಮೌಢ್ಯವೆಷ್ಟು? ವೈಚಾರಿಕತೆ ಎಷ್ಟು? ಎಂದು ಅವಲೋಕಿಸಿ ಆಚರಿಸುವುದರಿಂದ ಆರೋಗ್ಯ ಮತ್ತು ಸಂಸ್ಕೃತಿ ಎರಡನ್ನೂ ಕಾಪಾಡಿಕೊಳ್ಳಲು ಸಾಧ್ಯವಿದೆ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ವಿಜಯನಗರದ ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ (ಜೆಸಿಎಸಿ) ನಲ್ಲಿ ಸಾಗರ ತಾಲೂಕಿನ ಹೆಗ್ಗೋಡು-ಭೀಮನಕೋಣೆಯ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘವು ಹಮ್ಮಿಕೊಂಡಿರುವ ಮೂರು ದಿನಗಳ ನೈಸರ್ಗಿಕ ಬಣ್ಣದ ಅಪ್ಪಟ ಹತ್ತಿ ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟ ಮತ್ತು ಕೊಡು-ಕೊಳ್ಳುವವರ ಸಮಾವೇಶಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

ಈ ಆಧುನಿಕ ಯುಗದಲ್ಲಿ ಮನುಷ್ಯನಿಗೆ ಆರೋಗ್ಯ ಬಹಳ ಮುಖ್ಯ. ಅದೇ ವೇಳೆ ಆತ ಪರಂಪರೆಯ, ಸಂಸ್ಕೃತಿಯ ಮೌಲ್ಯಗಳನ್ನು ಹೊಂದುವುದೂ ಕೂಡ ಅಗತ್ಯ. ಈ ನಿಟ್ಟಿನಲ್ಲಿ ಹೆಗ್ಗೋಡಿನ ಚರಕ ಸಂಸ್ಥೆ ಹಲವು ದಶಕಗಳಿಂದ ಕೆಲಸ ಮಾಡುತ್ತಾ ಬಂದಿದೆ. ಇದನ್ನು ಪ್ರೋತ್ಸಾಹಿಸುವ ಕೆಲಸ ಸಮಾಜ-ಸರ್ಕಾರಗಳು ಮಾಡಬೇಕಿದೆ ಎಂದರು.

ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕಿ ಶುಭಾ ಸಂಜಯ್ ಅರಸ್ ಮಾತನಾಡಿ, ಚರಕ ಎಂದಾಕ್ಷಣ ಗಾಂಧೀಜಿ ನೆನಪಾಗುತ್ತಾರೆ. ಸ್ವಾತಂತ್ರ್ಯ ಚಳವಳಿ ಕಣ್ಮುಂದೆ ಬರುತ್ತದೆ. ಇದೇ ಚರಕ ಇವತ್ತು ಸುಸ್ಥಿರತೆಯ ಸಂಕೇತವಾಗಿ, ಕೌಶಲ್ಯದ ಪ್ರತೀಕವಾಗಿ ನೂರಾರು ಮಹಿಳೆಯರ ಬದುಕನ್ನು ರೂಪಿಸುತ್ತಿರುವುದು ಹೆಮ್ಮೆ ತಂದಿದೆ ಎಂದರು.

ಆರೋಗ್ಯ ಬಟ್ಟೆಗಳ ಅನಾವರಣ: ಚರಕ ಸಂಸ್ಥಾಪಕ, ರಂಗಕರ್ಮಿ ಪ್ರಸನ್ನ ಮಾತನಾಡಿ, ಚರಕ ಹಲವು ಬಗೆಯ ಆವಿಷ್ಕಾರದಲ್ಲಿ ತೊಡಗಿದ್ದು, ಆರೋಗ್ಯಕ್ಕೆ ಪೂರಕವಾದ ಅರಿಶಿಣ ಮತ್ತು ಬೇವಿನ ಬಣ್ಣದಲ್ಲಿ ಮಕ್ಕಳ ಒಳಬಟ್ಟೆ, ಮಠಾಧೀಶರು ತೊಡುವ ಖಾಷಾಯ ಬಟ್ಟೆಗಳನ್ನು ಅನಾವರಣಗೊಳಿಸಲಾಗಿದೆ ಎಂದರು. ಕೈಮಗ್ಗ ಮತ್ತು ಜವಳಿ ಇಲಾಖೆ ಉಪ ನಿರ್ದೇಶಕ ಬಿ.ಎಸ್. ಸೋಮಶೇಖರ್‌ಇದ್ದರು. ಚರಕದ ಅಧ್ಯಕ್ಷೆ ಮಹಾಲಕ್ಷ್ಮೀ ಅಧ್ಯಕ್ಷತೆ ವಹಿಸಿದ್ದರು. ಚರಕದ ಸಿಇಒ ಟೆರೆನ್ಸ್ ಪೀಟರ್, ಮಾರುಕಟ್ಟೆ ವಿಭಾಗದ ವ್ಯವಸ್ಥಾಪಕ ಕೃಷ್ಣ, ಮಧುರಾ ಇದ್ದರು. ವಿನ್ಯಾಸ ವಿಭಾಗದ ಮುಖ್ಯಸ್ಥೆ ಪದ್ಮಶ್ರೀ ನಿರೂಪಿಸಿದರು.



ಬದನವಾಳದಲ್ಲಿ ಗ್ರಾಮೀಣ ಸಂಸ್ಕೃತಿ ಅರಳಲಿ

ಬದನವಾಳದಲ್ಲಿ ಗುಡಿ ಕೈಗಾರಿಕೆ ಸಂಸ್ಕೃತಿಯೇ ಉಳಿಯಬೇಕು ಎಂದು ಸ್ವಾಮೀಜಿ ಪ್ರತಿಪಾದಿಸಿದರು. ಬದನವಾಳದಲ್ಲಿ ಗುಡಿ ಕೈಗಾರಿಕೆ ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ಪ್ರಸನ್ನ ಅವರ ನೇತೃತ್ವದಲ್ಲಿ ಕೈಗೊಂಡ ಸತ್ಯಾಗ್ರಹ ಕಾರಣದಿಂದ ಸರ್ಕಾರ ಈಚೆಗೆ ಅನುದಾನ ಬಿಡುಗಡೆ ಮಾಡಿದೆ. ಅದೇ ಉದ್ದೇಶಕ್ಕೆ ಹಣ ವೆಚ್ಚವಾಗಬೇಕು ಎಂದು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಗ್ರಹಿಸಿದರು.

ಈಗಾಗಲೇ ಈ ಕುರಿತಂತೆ ಸಚಿವ ಎಚ್.ಕೆ.ಪಾಟೀಲ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಿ.ಆರ್.ಪಾಟೀಲ ಅವರೊಂದಿಗೆ ತಾವು ಚರ್ಚಿಸಿದ್ದು, ಈ ಕುರಿತಂತೆ ಶೀಘ್ರದಲ್ಲೇ ಸಮಾನಮನಸ್ಕರ ಸಮಾಲೋಚನಾ ಸಭೆ ನಡೆಸಲಾಗುವುದು ಎಂದರು.

ಚರಕಕ್ಕೆ ರಿಬೇಟ್ ಸೌಲಭ್ಯಕ್ಕೆ ಪ್ರಸ್ತಾವ

ಚರಕಕ್ಕೆ ಸರ್ಕಾರದ ರಿಬೇಟ್ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ ಸರ್ಕಾರಕ್ಕೆ ಶೀಘ್ರ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಬೆಂಗಳೂರು ದಕ್ಷಿಣ ವಲಯದ ಜಂಟಿ ನಿರ್ದೇಶಕ ಬಿ.ಆರ್. ಯೋಗೇಶ್ ಭರವಸೆ ನೀಡಿದರು. ಚರಕಕ್ಕೆ ಇಲಾಖೆಯ ಸೌಲಭ್ಯ ಪಡೆಯಬೇಕಾದರೆ ಈಗಿರುವ ನಿಬಂಧನೆಗಳಿಗೆ ತಿದ್ದುಪಡಿ ತರಬೇಕಾಗಿದೆ. ಈ ನಿಟ್ಟಿನಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆ ತುರ್ತು ಗಮನ ಹರಿಸಲಿದೆ ಎಂದರು.

ಶ್ರೀಗಂಧದ ಮರ ಕಳವು ತಡೆಗೆ ಕೆಎಸ್‌ಡಿಎಲ್ ಕ್ರಮ ಸ್ವಾಗತಾರ್ಹ

ಮೈಸೂರು: ಶ್ರೀಗಂಧಮರ ಕಳವು ತಡೆಗೆ ಕೆಎಸ್‌ಡಿಎಲ್ ಮುಂದಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅವರು ಹೇಳಿರುವುದು ಸ್ವಾಗತಾರ್ಹ. ಇದೊಂದು ದಿಟ್ಟ ಹೆಜ್ಜೆ. ಶ್ರೀಗಂಧದ ಬೆಳೆಗಾರರಿಗೆ ಶುಭ ಸುದ್ದಿ. ಇದನ್ನು ಇನ್ನೂ ಗಟ್ಟಿ ಮಾಡಬೇಕಾದರೆ ಈ ಕೆಳಕಂಡ ಸುಧಾರಣೆಗಳನ್ನು ಸೇರಿಸಬೇಕೆಂದು ಮಂತ್ರಿಗಳಲ್ಲಿ ನನ್ನ ಸವಿನಯ ಪ್ರಾರ್ಥನೆ.

ಯಾರು ಶ್ರೀಗಂಧದ ಮರಕ್ಕೆ ರಕ್ಷಣಾ ಕವಚವನ್ನು ಕಂಡುಹಿಡಿಯುತ್ತಾರೆಯೋ ಅದನ್ನು ಶ್ರೀಗಂಧದ ರೈತರು ಒಪ್ಪಬೇಕು. ಅಂತಹ ಪರಿಕಮಕ್ಕೆ ಸರ್ಕಾರವು 50 ಲಕ್ಷ ರೂಪಾಯಿ ನಗದು ಬಹುಮಾನವನ್ನು ಘೋಷಿಸಬೇಕು. ಜೊತೆಗೆ ಅರಣ್ಯ ಇಲಾಖೆಯಲ್ಲಿ ಮಂತ್ರಿಗಳ ಹಾಗೂ ಅಧಿಕಾರಿಗಳ ಉತ್ಸಾಹದಿಂದ ಆರಂಭಗೊಂಡ ಅರಣ್ಯ ಪ್ರೋತ್ಸಾಹ ಯೋಜನೆಯನ್ನು ಶ್ರೀಗಂಧದ ಬೆಳೆಗೆ ಇಲಾಖೆಯು ಇಮ್ಮಡಿ ಪ್ರೋತ್ಸಾಹ ಧನವನ್ನು ಪ್ರಾರಂಭಿಸಬೇಕು. ರಕ್ಷಣಾ ಕವಚವನ್ನು ಕೊಡುವವರೆಗೂ ರೈತರಿಗೆ ಸನ್ಮಾನ ಮಾಡುವುದನ್ನು ಮುಂದೂಡಬೇಕು. ಆಕಸ್ಮಿಕವಾಗಿ ಈಗಲೇ ಮಾಡಿದರೆ 15 ವರ್ಷ ಕಷ್ಟಪಟ್ಟು ಬೆಳೆದ ಶ್ರೀಗಂಧದ ಮರಗಳಿಗೆ ಮರಗಳು ಕಳ್ಳ ಕಾಕರ ಕಣ್ಣಿಗೆ ಬಿದ್ದುರಾತ್ರೋರಾತ್ರಿ ರೈತಬಿಕಾರಿಯಾಗುವ ಅವಕಾಶಗಳು ಇದೆ. ಶ್ರೀಗಂದ್ ಬೆಳೆದ ರೈತರನ್ನ ರಕ್ಷಿಸುವುದು ಸರ್ಕಾರದ ಆದ್ಯ ಕರ್ತವ್ಯ. ಶ್ರೀಗಂಧದ ಮರಗಳನ್ನು ಸ್ವೀಕಾರ ಮಾಡಿದ 24 ಗಂಟೆಗಳಲ್ಲಿ, ಶೇಕಡ 33 ನಿಗದಿತ ಬೆಲೆ ಮೌಲ್ಯವನ್ನು ರೈತರಿಗೆ ಪಾವತಿ ಮಾಡಬೇಕು. ಶ್ರೀಗಂಧದ ಮರಗಳನ್ನು ಸ್ವೀಕಾರ ಮಾಡಿದ 12 ತಿಂಗಳಲ್ಲಿ ಉಳಿದ ನಿಗದಿತ ಬೆಲೆಯ ಮೌಲ್ಯವನ್ನು ರೈತರಿಗೆ ಪಾವತಿಸಬೇಕು. ಪಾವತಿ ಮಾಡಲು ನಿಧಾನವಾದರೆ ರೈತರಿಗೆ ಶೇಕಡ 12% ರೀತಿ ಬಡ್ಡಿ ಸಮೇತ ಮೌಲ್ಯವನ್ನು ಪಾವತಿ ಮಾಡಬೇಕು. ಪ್ರತಿ ವರ್ಷ 250 ಕೋಟಿ ರುಪಾಯಿಗಳನ್ನು ಗಂಧದ ಸಂಶೋಧನೆ, ವಿಸ್ತರಣೆ ಹಾಗೂ ವಿಮೆಗೆ ಮೀಸಲಿಡಬೇಕು. ಈ ಸುಧಾರಣೆಗಳನ್ನು ಸರ್ಕಾರವು ತಕ್ಷಣವೇ ಜಾರಿಗೆ ತರಬೇಕು.

• **ಎ.ಸಿ. ಲಕ್ಷ್ಮಣ** ಅರಣ್ಯ ಮತ್ತು ಪರಿಸರ ಇಲಾಖೆ ನಿವೃತ್ತ ಕಾರ್ಯದರ್ಶಿ ಕರ್ನಾಟಕ ಸರ್ಕಾರ

52 ದಿನಗಳ ಬೇಸಿಗೆ ಮೇಳ ಆರಂಭ

ಮೈಸೂರು: ಇಂಡಿಯನ್ ಕನ್ ಸ್ಯೂಮರ್ಸ್ ಎಂಟರ್ಟೈನರ್ಸ್ ವತಿಯಿಂದ ನಗರದ ವಸ್ತು ಪ್ರದರ್ಶನಪ್ರಾಧಿಕಾರದ ಆವರಣದಲ್ಲಿ ಮೇ 8 ರಿಂದ 52 ದಿನಗಳವರೆಗೆ ಬೇಸಿಗೆ ಮೇಳ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಎಸ್. ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು: ಗಾಂಧಿನಗರದ ದಿ ಮೈಸೂರು ಸಿಟಿ ಗಾಂಧಿನಗರ ಆದಿಕರ್ನಾಟಕ ಅಭಿವೃದ್ಧಿ ಸಂಘವು 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣರಾದ ಆದಿ ಕರ್ನಾಟಕ ಜನಾಂಗದ ಬಲಗೈ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗೆ ಪ್ರಧಾನ ಕಾರ್ಯದರ್ಶಿ ಕೆ. ವಿಶ್ವರಾಜ್ ಮೊ. 70196 12341, 97383 20080 ಸಂಪರ್ಕಿಸಬಹುದು.

ಪುರುಷಾರ್ಥ: ಶಂಕರನಾರಾಯಣರ ಅದ್ಭುತವಾದ ಸಾಮಾಜಿಕ ಕಾದಂಬರಿ

• **ಕನ್ನಡಪ್ರಭ ವಾರ್ತೆ** ಮೈಸೂರು



ಮೈಸೂರು ತಾಲೂಕು ದೊಡ್ಡಮಾರಗೌಡನಹಳ್ಳಿಯ ಶಂಕರನಾರಾಯಣ ಅವರು 'ಪುರುಷಾರ್ಥ' ಸಾಮಾಜಿಕ ಕಾದಂಬರಿ ಹೊರತಂದಿದ್ದಾರೆ.

ಡಿಎಂಜಿ ಹಳ್ಳಿ ಮೈಸೂರಿಗೆ ಸಮೀಪದಲ್ಲಿದೆ ಹಾಗೂ ಶಂಕರನಾರಾಯಣ ಅವರು ಮಹಾರಾಜ ಕಾಲೇಜಿನ ಹಿರಿಯ ವಿದ್ಯಾರ್ಥಿ. ಹೀಗಾಗಿ ಈ ಕಾದಂಬರಿಯ ವಸ್ತು ಮೈಸೂರು ನಗರ ಪರಿಸರಕ್ಕೆ ಹೊಂದಿಕೊಂಡಿದೆ. ಜೊತೆಗೆ ಮಹಾರಾಜ ಕಾಲೇಜು ಅಂಗಳದಿಂದಲೇ ಆರಂಭವಾಗುತ್ತದೆ. ಮಹಾರಾಜ ಕಾಲೇಜಿನ ಶಂಕರ ಮಹಾರಾಣಿ ಕಾಲೇಜಿನ ಸುಪ್ರಭಾ ಎಂಬವರನ್ನು ಪ್ರೀತಿಸಿ, ಪೋಷಕರು ಒಪ್ಪಿಗೆ ಪಡೆದು ಮದುವೆಯಾಗು ವುದೇ ಈ ಕಾದಂಬರಿಯ ಕೇಂದ್ರ ವಸ್ತು.



ಶಂಕರನ ಚಿಕ್ಕಪ್ಪ ಶ್ಯಾಮರಾಯರ ಕರುಣಾಜನಕ ಕಥೆಯೂ ನಡುವೆ ಬರುತ್ತದೆ. ಅವರಿಗೆ ಜನ್ಮನೀಡಿದ ತಾಯಿ ಭಾಗ್ಯಮ್ಮ, ಅಣ್ಣ ಸುಬ್ಬರಾಯಪ್ಪ ಅವರ ಸಂಬಂಧ ಕಾಲಗರ್ಭದಲ್ಲಿಮರೆಯಾಗಿತ್ತು. ಕೆಂಪಾಚಾರಿ ಎಂಬವನ ಮೂಲಕ ಅದು ಬಹಿರಂಗವಾಗುತ್ತದೆ. ಶಾಮರಾಯರು ತಮ್ಮ ಅಣ್ಣನ ಮಗ ಶಂಕರನಿಗೆ ಸುಪ್ರಭಾಳ ಜೊತೆ ವಿವಾಹ ನೆರವೇರಿಸಿ, ಸಮಸ್ತ ಆಸ್ತಿಯನ್ನುಧಾರೆ ಎರೆದು ಅವರ ಅಭ್ಯುದಯಕ್ಕೆ ಕಾರಣಕರ್ತರಾಗುತ್ತಾರೆ.

ಸುಪ್ರಭಾಳ ತಂದೆ ರಾಮನಾಥಯ್ಯ, ತಾಯಿ ಸುಶೀಲಮ್ಮ, ಅಣ್ಣಶ್ರೀಕಾಂತ, ಅತ್ತಿಗೆ ಶಾಂತಾ, ಈ ದಂಪತಿಯ ಪುತ್ರ ರಘು ಸೇರಿದಂತೆ ಹತ್ತು ಹಲವು ಪಾತ್ರಗಳ ಮೂಲಕ ಕಾದಂಬರಿ ಬೆಳೆಯುತ್ತಾ ಹೋ ಗುತ್ತದೆ. ಶಂಕರ ಮುಂದೆ ಎಂಎ, ಪಿಎಚ್‌ಡಿ ಮಾಡಿ ಉಪನ್ಯಾಸಕನಾಗುತ್ತಾನೆ .ಜೊತೆಗೆ ಕೃಷಿಯಲ್ಲಿಯೂ ತೊಡಗಿಸಿಕೊಳ್ಳುತ್ತಾನೆ. ಸುಪ್ರಭಾ ಎಂಬಿಬಿಎಸ್, ಎಂಡಿ ವೈದ್ಯೆಯಾಗುತ್ತಾಳೆ. ಶ್ಯಾಮಸುಂದರ್ ಎಂಬ ಆಸ್ಪತ್ರೆಯನ್ನು ತೆರೆದು, ಜನಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಇಡೀ ಕಾದಂಬರಿಯನ್ನು ಶಂಕರನಾರಾಯಣ ಅವರು ಚಿತ್ರಿಸಿರುವ ರೀತಿಯ ಅನನ್ಯವಾಗಿದೆ. ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ. ಎಪ್ಪತ್ತರ ದಶಕದ ಮೈಸೂರು ಹೇಗಿತ್ತು? ಎಂಬುದರ ನೋಟ ಕೂಡ ಸಿಗುತ್ತದೆ. ಇದೊಂದು ರೀತಿಯಲ್ಲಿ ಆತ್ಮಕಥೆಯ ರೂಪದಲ್ಲಿ ಸಾಗುತ್ತದೆ.

ಶಂಕರನಾರಾಯಣರು ವಿದ್ಯಾರ್ಥಿಯಾಗಿದ್ದಾಗ ಅಂದರೆ 1974-75 ರಲ್ಲಿ ಬರೆಯಲು ಆರಂಭಿಸಿದ ಈ ಕಾದಂಬರಿ, ಕೋವಿಡ್ ಸಂದರ್ಭದಲ್ಲಿ ಪೂರ್ಣಗೊಂಡು, ಸರಿಸುಮಾರು ನಾಲ್ಕು ದಶಕಗಳ ನಂತರ ಪ್ರಕಟವಾಗಿರುವುದು ವಿಶೇಷ. ಶ್ರೀಶಾರದಾ ಪ್ರಕಾಶನ ಈ ಕಾದಂಬರಿಯನ್ನು ಪ್ರಕಟಿಸಿದ್ದು, ಡಾ.ಕೆ.ಅನಂತರಾಮು ಮುನ್ನುಡಿ, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಬೆನ್ನುಡಿ ಬರೆದಿದ್ದಾರೆ. ಆಸಕ್ತರು ಮೊ. 96329 63175 ಸಂಪರ್ಕಿಸಬಹುದು.

ಅಮೆರಿಕದಲ್ಲಿ ಮೊಳಗಿದ ಕನ್ನಡ ಜಾನಪದ ಝೇಂಕಾರ



• **ಕನ್ನಡಪ್ರಭ ವಾರ್ತೆ** ಮೈಸೂರು

ಅಮೆರಿಕಾದ ವರ್ಜೀನಿಯಾ ಮತ್ತು ಮೇರಿಲ್ಯಾಂಡ್ ರಾಜ್ಯಗಳಲ್ಲಿರುವ ರಿಚ್ಮಂಡ್ ಕನ್ನಡ ಸಂಘ ಮತ್ತು ಕಾವೇರಿ ಕನ್ನಡ ಸಂಘಗಳು ಏ.18 ಮತ್ತು ಮೇ 2 ರಂದು ಆಚರಿಸಿದ ಯುಗಾದಿ ಹಬ್ಬದ ಉತ್ಸವಗಳಿಗೆ ಜಾನಪದ ಕಲಾವಿದರಾದ ಡಾ.ಕಾ. ರಾಮೇಶ್ವರಪ್ಪ ಅವರನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲಾಗಿತ್ತು.

ಅಮೆರಿಕಾದಲ್ಲಿ ಇನಿದನಿ ಇಂಟರ್‌ನ್ಯಾಷನಲ್ ಕಲಾತಂಡ ಕಟ್ಟಲು ಪ್ರೋತ್ಸಾಹ ನೀಡುತ್ತಿರುವ ಅಕ್ಕ ಸಂಸ್ಥೆ ಅಧ್ಯಕ್ಷ ಅಮರನಾಥ ಗೌಡ ಮತ್ತು ಕಲಾತಂಡದ ಸಂಘಟಕ ಮಾದೇಶ್ ಬಸವರಾಜ್ ಮತ್ತು ಪ್ರೋತ್ಸಾಹ ನೀಡುತ್ತಿರುವ ಅಕ್ಕ ಸಂಸ್ಥೆ ಮತ್ತು ನಾವಿಕ ಸಂಸ್ಥೆಗಳು ಹಾಗೂ ವಿವಿಧ ಕನ್ನಡ ಸಂಘಟನೆಗಳಿಗೆ ರಾಮೇಶ್ವರಪ್ಪ ಅಭಿನಂದನೆ ಸಲ್ಲಿಸಿದ್ದಾರೆ.

ಅಮೆರಿಕಾದಲ್ಲಿ ನೆಲೆಸಿರುವ ಮಾದೇಶ್ ಬಸವರಾಜ್, ಸೌಮ್ಯ ಚಿಕ್ಕಮಗಳೂರು, ರಘು ಆಲೂರು, ಸ್ಮಿತಾ ಎಸ್ತರ್‌ಮುಂತಾದವರು ಇನಿದನಿ ಇಂಟರ್‌ನ್ಯಾಷನಲ್ ಜಾನಪದ ತಂಡದ ಕಲಾವಿದರಾಗಿ ಅಮೋಘ ಪ್ರದರ್ಶನ ನೀಡಿ ಕನ್ನಡಿಗರ ಮನ ಗೆದ್ದಿದ್ದಾರೆ. ಈ ವೇಳೆ ಅಮೆರಿಕಾದ ಮೇರಿಲ್ಯಾಂಡ್ ರಾಜ್ಯದ ಗೇದರ್ಸ್ ಬರ್ಗ್‌ನಲ್ಲಿ ಸ್ಥಾಪಿಸಿರುವ ಜೆಎಸ್ಎಸ್ ಸ್ಪಿರಿಚ್ಯುವಲ್ ಮಿಷನ್ ಗೆ ಭೇಟಿ ನೀಡಿ ಶ್ರೀಮಠವು ನಿರ್ಮಿಸುತ್ತಿರುವ ದೇವಾಲಯಗಳು, ಕಲಾಶಾಲೆಗಳು, ಪ್ರವಚನ ಸಭಾಂಗಣ ಮತ್ತು ಪ್ರಸಾದ ವ್ಯವಸ್ಥೆ ವೀಕ್ಷಿಸಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಗೆ ವಂದನೆ ಸಲ್ಲಿಸಿದ್ದಾರೆ.

ಆಸ್ಪತ್ರೆಗೆ ಬಂದಿದ್ದ ಮಹಿಳೆ ನಾಪತ್ತೆ: ದೂರು

ಮೈಸೂರು: ಮೈಸೂರು ತಾಲೂಕು ನಾಡನಹಳ್ಳಿ ನಿವಾಸಿ ಅಜಯ್ ಕುಮಾರ್‌ಎಂಬವರ ಪತ್ನಿ ಎಚ್.ಆರ್. ನಂದಿನಿ (28) ನಾಪತ್ತೆಯಾಗಿದ್ದಾರೆ. ನನ್ನ ಮಗ ಅಜಯ್ ಕುಮಾರ್‌ಗೆ 2016ರಲ್ಲಿ ಎಚ್.ಆರ್.ನಂದಿನಿ ಅವರೊಂದಿಗೆ ಮದುವೆ ಮಾಡಿದ್ದು, 9 ವರ್ಷಗಳ ಹಿಂದೆ ಅಜಯ್ ಕುಮಾರ್‌ಗೆ ಸ್ಟ್ರೋಕ್ ಆಗಿ ಅನಾರೋಗ್ಯ ದಿಂದ ಬಳಲುತ್ತಿದ್ದಾನೆ. ಹೀಗಿರುವಾಗ ಕಳೆದ ಏ.16 ರಂದು ನನ್ನ ಮಗನನ್ನು ಸೊಸೆ ನಂದಿನಿ, ಬೃಂದಾವನ ಬಡಾವಣೆಯಲ್ಲಿರುವ ಸರ್ಕಾರಿ ಪ್ರಕೃತಿ ಆಯುರ್ವೇದ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿ ದ್ದರು. ಆಸ್ಪತ್ರೆಯ ಖರ್ಚಿಗಾಗಿ 20000 ರು. ಅನ್ನು ಸೊಸೆ ಬಳಿ ನೀಡಿದ್ದೆ. ಏ.19 ರಂದು ಸೊಸೆ ಆಸ್ಪತ್ರೆ ಯಿಂದ ತನ್ನ ಸ್ಕೂಟರ್‌ನಲ್ಲಿ ಹೋದವರು ಕಾಣೆಯಾಗಿ ದ್ದಾರೆ ಎಂದು ಅತ್ತೆ ಲಕ್ಷ್ಮಮ್ಮ ದೂರು ನೀಡಿದ್ದಾರೆ. ನಂದಿನಿ



ಚಹರೆ- 5 ಅಡಿ ಎತ್ತರ, ಸಾಧಾರಣ ಮೈಕಟ್ಟು, ದುಂಡು ಮುಖ, ಎಣ್ಣೆಗೆಂಪು ಮೈಬಣ್ಣ, ಕಪ್ಪು ತಲೆ ಕೂದಲು, ಬಲ ತೋಳಿನ ಮೇಲೆ ಯೇಸುವಿನ ಶಿಲುಬೆ ಟ್ಯಾಟೋ ಇದೆ. ಕನ್ನಡ ಮತ್ತು ತೆಲುಗು ಮಾತನಾಡು ತ್ತಾರೆ. ಕಾಣೆಯಾದ ದಿನ ನೀಲಿ ಬಣ್ಣದ ಚೂಡಿದಾರ ಧರಿಸಿದ್ದರು. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ದೂ. 0821- 2418314 ಸಂಪರ್ಕಿಸಲು ವಿವಿ ಪುರಂ ಠಾಣೆಯ ಪೊಲೀಸರು ಕೋರಿದ್ದಾರೆ.

ಪೊಲೀಸರ ಒತ್ತಡವನ್ನು ಯೋಗಾಭ್ಯಾಸ ತಿಳಿಗೊಳಿಸುತ್ತದೆ

ಮಲ್ಲಿಕಾರ್ಜುನ ಬಾಲದಂಡಿ | ಜಿಲ್ಲಾ ಪೊಲೀಸ್ ಅಧಿಕಾರಿಗಳು– ಸಿಬ್ಬಂದಿ ಯೋಗ ಶಿಬಿರ ಸಮಾರೋಪ





• **ಕನ್ನಡಪ್ರಭ ವಾರ್ತೆ** ಮೈಸೂರು

ಪೊಲೀಸರು ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಹಗಲಿರುಳು ಶ್ರಮಿಸುತ್ತಿದ್ದಾರೆ. ನಮ್ಮ ಪೊಲೀಸ್ ಸಿಬ್ಬಂದಿ ಎಷ್ಟು ಒತ್ತಡದಲ್ಲಿರುತ್ತಾರೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಅಂತಹ ಒತ್ತಡದ ವಾತಾವರಣವನ್ನು ಯೋಗಾಭ್ಯಾಸವು ತಿಳಿಗೊಳಿಸುತ್ತದೆ ಎಂದುಮೈಸೂರುಎಸ್ಪಿಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

ಜ್ಯೋತಿನಗರದಲ್ಲಿರುವ ಡಿಎಆರ್ ಕವಾಯತು ಮೈದಾನದಲ್ಲಿ ಜಿಲ್ಲಾ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಾಗಿ ಆಯೋಜಿಸಿದ್ದ 5 ದಿನಗಳಯೋಗಶಿಬಿರದಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪೊಲೀಸರಲ್ಲಿ ಏಕಾಗ್ರತೆ ಹೆಚ್ಚಿಸಲು ಮತ್ತು ಸಾರ್ವಜನಿಕರೊಂದಿಗೆ ಮತ್ತಷ್ಟು ಸಂಯಮದಿಂದ ವರ್ತಿಸಲು ಯೋಗ ರಾಮಬಾಣ ಎಂದರು.

ಪೊಲೀಸರ ಆರೋಗ್ಯ ಚೆನ್ನಾಗಿದ್ದರೆ ಮಾತ್ರ ಸಮಾಜದ ಆರೋಗ್ಯ ಚೆನ್ನಾಗಿರಲು ಸಾಧ್ಯ. ಹೀಗಾಗಿ, ನೀವು ಯೋಗದ ಜೊತೆಗೆ ಪ್ರತಿ ದಿನ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಬೇಕು. ಆ ಮೂಲಕ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿರಬೇಕು. ಇದರಿಂದ ಪೊಲೀಸ್ ಇಲಾಖೆಗೂ ತಮಗೂ ಒಳ್ಳಿತಾಗಲಿದೆ ಎಂದರು.

ಅಂತಾರಾಷ್ಟ್ರೀಯ ಯೋಗ ಗುರು ಡಾ.ಭಾಗೀರಥಿ ಕನ್ನಡತಿ ಅವರ ಮಾರ್ಗದರ್ಶನದಲ್ಲಿ 400 ಮಂದಿ ಜಿಲ್ಲಾ ಪೊಲೀಸರು ಯೋಗ ತರಬೇತಿ ಪಡೆದಿದ್ದಾರೆ. ಇದೇ ವೇಳೆ ಅವರನ್ನು ಸನ್ಮಾನಿಸಲಾಯಿತು.

ಹೆಚ್ಚುವರಿ ಎಸ್ಪಿಗಳಾದ ಎಲ್. ನಾಗೇಶ್, ಸಿ. ಮಲ್ಲಿಕ್, ಡಿಎಆರ್ ಡಿವೈಎಸ್ಪಿ ವೀರಣ್ಣ ಮೊದಲಾದವರು ಇದ್ದರು.








ಗೂಡು ಕಟ್ಟಿದ ಗುಬ್ಬಚ್ಚಿ...!

ಸಾಂಸ್ಕೃತಿಕ ನಗರಿ ಮೈಸೂರಿನ ಹೊರವಲಯದಲ್ಲಿ ಬಯಾ ನೇಕಾರ(ಬಯಾವೀವರ್) ಗುಬ್ಬಚ್ಚಿಯೊಂದು ಶುಕ್ರವಾರ ಗೂಡು ಕಟ್ಟಿಕೊಂಡಿದ್ದು ಕನ್ನಡಪ್ರಭ ಹಿರಿಯ ಛಾಯಾಗ್ರಾಹಕ ಅನುರಾಗ್ ಬಸವರಾಜ್ ಅವರ ಕ್ಯಾಮೆರಾದಲ್ಲಿ ಸೆರೆಯಾಗಿದ್ದು ಹೀಗೆ.

ಹೂಟಗಳ್ಳಿ ನಗರಸಭೆ: ಆಸ್ತಿ ತೆರಿಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸಿದರೆ ಶೇ.5 ರಿಯಾಯ್ತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಆಸ್ತಿ ಮಾಲೀಕರು ಮತ್ತು ಅನುಭೋಗದಾರರಿಗೆ ತಮ್ಮ ತಮ್ಮ ಆಸ್ತಿಗಳ ಆಸ್ತಿ ತೆರಿಗೆಯನ್ನು 2026- 27ನೇ ಸಾಲಿನ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಪಾವತಿಸಬೇಕಾಗಿದೆ. 2026 - 27ನೇ ಆರ್ಥಿಕ ವರ್ಷದ ಮೇ 1 ರಿಂದ 31ರ ಒಳಗೆ ಆಸ್ತಿ ತೆರಿಗೆಯನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಿ ಶೇ.5 ರಷ್ಟು ರಿಯಾಯಿತಿಯನ್ನು ಪಡೆಯಬಹುದು. ಮೇ 31ರ ನಂತರ ಮತ್ತು ಜೂನ್ ನಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಿದರೆ, ಆಸ್ತಿ ತೆರಿಗೆ ಮೇಲೆ ಯಾವುದೇ ದಂಡ ಅಥವಾ ರಿಯಾಯಿತಿಯಾಗಲು ಇರುವುದಿಲ್ಲ. ಜುಲೈನಲ್ಲಿ ಆಸ್ತಿ ತೆರಿಗೆ ಪಾವತಿಸಿದ್ದಲ್ಲಿ ತಮ್ಮ ಮೂಲ ಆಸ್ತಿ ತೆರಿಗೆಯ ಮೇಲೆ ಪ್ರತಿ ತಿಂಗಳು ಶೇ.2 ರಷ್ಟು ದಂಡದ ಮೊತ್ತದೊಂದಿಗೆ ಆಸ್ತಿ ತೆರಿಗೆ ಪಾವತಿಸಬೇಕಾಗುತ್ತದೆ. ಹಾಗೂ ಕರ್ನಾಟಕ ಒನ್ ಕೇಂದ್ರದಲ್ಲಿ ವಿದ್ಯುನ್ಮಾ ನಾಗರೀಕ ವಿತರಣ ನಿರ್ದೇಶನಾಲ ನಿಗದಿಪಡಿಸಿರುವ ಶುಲ್ಕ ಪಾವತಿಸಿ, ಸಾರ್ವಜನಿಕರು ಇ-ಆಸ್ತಿ ತಂತ್ರಾಂಶದಲ್ಲಿ ಖಾತಾ ಸೃಜನೆಗೆ ಅರ್ಜಿ ಸಲ್ಲಿಸಬಹುದು ಎಂದು ಹೂಟಗಳ್ಳಿ ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.



ಮೈಸೂರಿನ ಭಾರತೀಯ ಜೀವ ವಿಮಾ ನಿಗಮದ ನೂತನ ವಿಭಾಗಾಧಿಕಾರಿ ಆಗಿ ಅಧಿಕಾರ ಸ್ವೀಕರಿಸಿದ ಬಿ.ಪಿ. ರವಿ ಅವರನ್ನು ಎಲ್.ಐಸಿ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶುಕ್ರವಾರ ಅಭಿನಂದಿಸಲಾಯಿತು. ವಿಭಾಗದ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪಾರ್ಥಸಾರಥಿ, ಉಪಾಧ್ಯಕ್ಷ ನಾಗೇಶ್ ಮೂರ್ತಿ, ಖಜಾಂಚಿ ಸುರೇಂ ದ್ರ, ಪ್ರಧಾನ ಕಾರ್ಯದರ್ಶಿ ಬಿ.ಪುಟ್ಟಸ್ವಾಮಿ, ಸಹ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ ಇದ್ದರು.

16,17ರಂದು ಮ್ಯಾಂಡೋಲಿನ್ ಪ್ರಸಾದ್ ಅವರಿಂದ ಎರಡು ದಿನದ ಸುಗಮ ಸಂಗೀತ ಕಾರ್ಯಾಗಾರ

• **ಕನ್ನಡಪ್ರಭ ವಾರ್ತೆ** ಮೈಸೂರು

ಕರ್ನಾಟಕ ಸುಗಮ ಸಂಗೀತ ಪರಿಷತ್ ಮತ್ತು ಶ್ರೀ ಅನಂತೇಶ್ವರ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಖ್ಯಾತ ಸಂಗೀತ ನಿರ್ದೇಶಕ ಎನ್.ಎಸ್. ಪ್ರಸಾದ್ (ಮ್ಯಾಂಡೋಲಿನ್ ಪ್ರಸಾದ್) ಅವರಿಂದ ಎರಡು ದಿನಗಳ ವಿಶೇಷ ಸುಗಮ ಸಂಗೀತ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್‌ಅಧ್ಯಕ್ಷ ನಾಗರಾಜ್ ವಿ. ಬೈರಿ ತಿಳಿಸಿದ್ದಾರೆ.

ಸಂಗೀತದ ಆಸಕ್ತರಿಗಾಗಿ ಈ ಕೆಳಗಿನ ವಿವರಗಳೊಂದಿಗೆ ಕಾರ್ಯಾಗಾರ ನಡೆಯಲಿದೆ ಎಂದು ತಿಳಿಸಿದ್ದಾರೆ. ಕಾರ್ಯಾಗಾರದ ಮುಖ್ಯಾಂಶಗಳು - ಸಂಗೀತದ ಒಳಗೆ: ಸಂಗೀತದ ಆಳವಾದ ಅರಿವು ಮತ್ತು ಸೌಂದರ್ಯದ ಪರಿಚಯ. ಸುಗಮ ಸಂಗೀತದ ಬಗ್ಗೆ: ಭಾವಗೀತೆಗಳ ಗಾಯನ ಶೈಲಿ ಮತ್ತು ತಾಂತ್ರಿಕತೆ. ಧ್ವನಿ ಸಂಸ್ಕರಣೆ: ಗಾಯನದಲ್ಲಿ ಧ್ವನಿಯ ಬಳಕೆಯ ಕುರಿತು ಮಾರ್ಗದರ್ಶನ. ಕಾರ್ಯಕ್ರಮದ ವಿವರಗಳು: ಮೇ 16 ಮತ್ತು 17 ರ ಬೆಳಗ್ಗೆ 9.30 ರಿಂದ ಸಂಜೆ 6ರವರೆಗೆ. ಸ್ಥಳ: ಶ್ರೀ ಅನಂತೇಶ್ವರ ಭವನ, ಕೆ.ಎಚ್.ಬಿ. ಕಾಲೋನಿ, ಹೂಟಗಳ್ಳಿ, ಮೈಸೂರು. ನೋಂದಣಿ ಶುಲ್ಕ: ರು. 100 ಮಾತ್ರ (ಸಾಂಕೇತಿಕವಾಗಿ). ಕಾರ್ಯಾಗಾರದಲ್ಲಿ ಪಾಲ್ಗೊಳ್ಳುವ ಶಿಬಿರಾರ್ಥಿಗಳಿಗೆ ಉಚಿತ ತಿಂಡಿ, ಊಟ ಮತ್ತು ಕಾಫಿ/ಟೀ ವ್ಯವಸ್ಥೆಯನ್ನು ಮಾಡಲಾಗಿದೆ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಸಂಚಾಲಕರನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ: ಸುಜಾತಾ ಜಯ ಕುಮಾರ್: ಮೊ. 94836 38973, ಗೀತಾಲಕ್ಷ್ಮಿ ಕಿಣಿ, ಮೊ. 98861 27640.

ಪುರಸಭಾ ಕಾರ್ಯಾಲಯ, ಬಿಡದಿ

ಬಿಡದಿ ಮುಖ್ಯ ರಸ್ತೆ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ – 562109
ದೂರವಾಣಿ : 080–27282572 e-mail: ka.bidadi.tmc@gmail.com
website: http://www.bidaditown.mrc.gov.in

ಸಂ: ಪುಕಾಬಿ/ಆ.ಶಾ/ಇ–ಟೆಂಡರ್/ಸಿಆರ್/02/2025–26 ದಿನಾಂಕ: 08.05.2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ **ಪುರಸಭಾ ನಿಧಿ ಅನುದಾನದಡಿ** ಟೆಂಡರ್‌ನ್ನು ಆಹ್ವಾನಿಸಿದ್ದು. ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ **https://kppp.karnataka.gov.in** ಮುಖಾಂತರ ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಬಹುದು. ಮುಂದುವರೆದಂತೆ ಇಂಡೆಂಟ್ ನಂ ಹಾಗೂ ಅಂದಾಜು ಮೊತ್ತಗಳಂತೆ **(1)** DMA/2025-26/SE5674/CALL-3 (Other, **73.54 Lakhs** EMD - **147082/-**) ಗಳಿದ್ದು, ಕೆ.ಪಿ.ಪಿ.ಪಿ. ಪೋರ್ಟಲ್ **https://kppp.karnataka.gov.in** ಮುಖಾಂತರ ಡೌನ್‌ಲೋಡ್ ಮಾಡಿಕೊಂಡು **ದಿನಾಂಕ: 16.05.2026ರ ಸಂಜೆ 5:30 ಗಂಟೆ ಒಳಗಾಗಿ ಅಪ್‌ಲೋಡ್** ಮಾಡಬಹುದಾಗಿರುತ್ತದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಆರೋಗ್ಯ ಶಾಖೆಯಿಂದ ಪಡೆಯಬಹುದು.

ಸಹಿ/– **ಅಧ್ಯಕ್ಷರು**, ಪುರಸಭೆ, ಬಿಡದಿ
ಸಹಿ/– **ಮುಖ್ಯಾಧಿಕಾರಿ**, ಪುರಸಭೆ, ಬಿಡದಿ
DIPR/BSD/51/SA/2026-27

ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.
ದೂರವಾಣಿ: 080–23349434, e-mail: dpikseab@gmail.com
ಸಂಖ್ಯೆ: KSEAB/DPIE/B4(OTR)/1/2026-BSEC/90135 ದಿನಾಂಕ: 08.05.2026

ಇ–ಟೆಂಡರ್ ಪ್ರಕಟಣೆ

ನಿರ್ದೇಶಕರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಇವರು **"2026 ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಇತರೆ ಪರೀಕ್ಷೆಗಳ ಪೂರ್ವ ಮುದ್ರಿತ ಉತ್ತೀರ್ಣ ಪ್ರಮಾಣಪತ್ರಗಳು, ಪರಿವರ್ತನೀಯ ದತ್ತಾಂಶಗಳ ಮೇಲುಮುದ್ರಣ ಸಹಿತ ಸರಬರಾಜು"** ಕಾರ್ಯಕ್ಕೆ ಅರ್ಹ ಸಂಸ್ಥೆಗಳಿಂದ ಇ–ಟೆಂಡರ್ ಅರ್ಜಿಗಳನ್ನು ಕೆ.ಟಿ.ಪಿ.ಪಿ. ಅಧಿನಿಯಮ–1999 ಮತ್ತು ಕೆ.ಟಿ.ಪಿ.ಪಿ. ನಿಯಮಗಳು–2000, ಅಡಿಯಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ದಸ್ತಾವೇಜುಗಳನ್ನು ಮಂಡಲಿಯ ಅಂತರ್ಜಾಲತಾಣ **https://Kseab.karnataka.gov.in** ಮತ್ತು **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಾರಂಭ **ದಿನಾಂಕ: 08.05.2026,** ಟೆಂಡರ್ ಪೂರ್ವ ಬಿಡ್ ಸಭೆ **ದಿನಾಂಕ: 15.05.2026ರ ಪೂರ್ವಾಹ್ನ 11.30 ಗಂಟೆ,** ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ: 22.05.2026ರ ಸಂಜೆ 5.00 ಗಂಟೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25.05.2026ರ ಪೂರ್ವಾಹ್ನ 11.30 ಗಂಟೆ,** ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ **ದಿನಾಂಕ: 27.05.2026 ಪೂರ್ವಾಹ್ನ 11.30 ಗಂಟೆ,** ಸದರೀ ಟೆಂಡರ್‌ನ ಅಂದಾಜು ಮೌಲ್ಯ **ರೂ.30,14,000/–** ಮತ್ತು ಮುಂಗಡ ಠೇವಣಿ **ರೂ.60,280/–** ಗಳಾಗಿದ್ದು ಹೆಚ್ಚಿನ ವಿವರಗಳನ್ನು ಮಂಡಲಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ನಿರ್ದೇಶಕರು, ಪರೀಕ್ಷೆಗಳು

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ.45, 3ನೇ ಮಹಡಿ, ಕೆ.ಎಸ್.ಹೆಚ್.ಡಿ.ಸಿ.ಎಲ್ ಕಾಂಪ್ಲೆಕ್ಸ್, ಎಂ.ಜಿ.ರಸ್ತೆ, ಬೆಂಗಳೂರು–01. ದೂ: 080–25582656/ 71204445/ 71204446
ಇ–ಮೇಲ್: gmmkshdcl@gmail.com
ವೆಬ್‌ಸೈಟ್:http://www.cauverycrafts.com
ಕಡತದ ಸಂಖ್ಯೆ: ಕೆಎಸ್‌ಹೆಚ್‌ಡಿಸಿಎಲ್/ಎಂಕೆಟಿಜಿ/ಇ–ಟೆಂಡರ್/137/2026–27, ದಿನಾಂಕ: 08.05.2026
ಟೆಂಡರ್ ಉಲ್ಲೇಖ ಸಂಖ್ಯೆ: ಕೆಎಸ್‌ಹೆಚ್‌ಡಿಸಿಎಲ್/2026–27/ಐಎನ್‌ಡಿ0017

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು (ಕೆಎಸ್‌ಹೆಚ್‌ಡಿಸಿಎಲ್) ಪ್ರಕಟಣೆಯಲ್ಲಿ ನಿರ್ದಿಷ್ಟಪಡಿಸಿರುವ ವಿವರಣೆಯಂತೆ ಅನುಮೋದನೆ ಮೇಲೆ ಮಾರಾಟದ (ಎಸ್‌ಓಎ) ಆಧಾರದ ಮೇಲೆ **ಚಿನ್ನದ ಲೇಪನ ಮಾಡಿದ, ಗಂಡಬೇರುಂಡ ಇರುವ 92.5 ಸ್ಟರ್ಲಿಂಗ್ ಬೆಳ್ಳಿ ಪದಕಗಳು ಜೊತೆಗೆ ಅಗತ್ಯ ಸಹಾಯಕ ಭಾಗಗಳ ತಯಾರಿಕೆ ಮತ್ತು ಸರಬರಾಜಿಗಾಗಿ** ಅರ್ಹ ಟೆಂಡರುದಾರರುಗಳಿಂದ ದ್ವಿ ಲಕೋಟೆ ಟೆಂಡರ್ ಕ್ರಮದಲ್ಲಿ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಿರುವುದು. ಟೆಂಡರ್ ಪ್ರಕಟಣೆ ವಿವರಗಳನ್ನು ವೆಬ್‌ಸೈಟ್: **www.kppp.karnataka.gov.in** ಇಲ್ಲಿಗೆ ಲಾಗಿನ್ ಆಗುವ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಪಡೆದುಕೊಳ್ಳಬಹುದು. ಟೆಂಡರ್ ದಸ್ತಾವೇಜುಗಳನ್ನು ಪಡೆಯಲು ಪ್ರಾರಂಭವಾಗುವ **ದಿನಾಂಕ: 08.05.2026.** ಬಿಡ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ: **15.05.2026.**

ಸಹಿ/– ಪ್ರಧಾನ ವ್ಯವಸ್ಥಾಪಕರು (ಮಾರುಕಟ್ಟೆ)

ಕರ್ನಾಟಕ ಸರ್ಕಾರ ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕಾರವಾರ ಉಪ–ವಿಭಾಗ, ಕಾರವಾರ

ಎಂಜಿ ರಸ್ತೆ, ಕಾಜುಬಾಗ, ಕಾರವಾರ–581301. (ಉ.ಕ.)
ದೂರವಾಣಿ: 08382–226365 ಇ–ಮೇಲ್: acfkwr@gmail.com
ನಂ. ಓ3/ಸಅಸಂ/ವಿವ–/ಇ–ಮರುಟೆಂಡರ್–6/2025–26 ದಿನಾಂಕ: 02–05–2026

ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ವಿವಿಧ ಯೋಜನೆಯಡಿ 2026ನೇ ಮಳೆಗಾಲದಲ್ಲಿ ನೆಡುತೋಪು ರಚನೆ / ನಿರ್ವಹಣೆ, ನರ್ಸರಿ ಕಾಮಗಾರಿ ಇತ್ಯಾದಿ ಕಾಮಗಾರಿ ಸಂಕ್ಷಿಪ್ತ ಇ–ಟೆಂಡರ ಕರೆಯಲಾಗಿರುತ್ತದೆ. ಮರು ಇ–ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 12–05–2026 ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕಾರವಾರ ವಿಭಾಗ, ಕಾರವಾರ ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು. (ದೂರವಾಣಿ ಸಂಖ್ಯೆ: 08382–226365).

DIPR/KWR/KSMCA/113/26-27 Dt. 07.05.2026

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ

GTTC
ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560 010.
ದೂ.ಸಂ.: 080–23152118/119, 23384303,
ಫ್ಯಾಕ್ಸ್: 080–23301683, ವೆಬ್‌ಸೈಟ್: https://gttc.karnataka.gov.in

ಎಲೆಕ್ಟ್ರಾನಿಕ್ ಟೆಂಡರ್ ಪ್ರಕಟಣೆ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು (ಜಿಟಿಟಿಸಿ), **ಟರ್ನ್ ಕೀ ಆಧಾರದ ಮೇಲೆ ಇಂಡಸ್ಟ್ರಿಯಲ್ ಕಂಟ್ರೋಲ್ ಸಿಸ್ಟಮ್ ಮತ್ತು ಆಟೋಮೇಷನ್‌ನಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರವನ್ನು ಸ್ಥಾಪಿಸಲು ಇ–ಟೆಂಡರ್ ಆಹ್ವಾನಿಸಿದೆ.** GTTC/MSDC/TENDER/ICS&ALab./BD-288/2025-26 ಇ–ಟೆಂಡರ್ ಮೂಲಕ ಆಫರ್‌ಗಳನ್ನು ಅಪ್‌ಲೋಡ್ ಮಾಡಲು **ಕೊನೆಯ ದಿನಾಂಕ: 10.06.2026.** ಇನ್ನಿತರೆ ವಿವರಗಳಿಗಾಗಿ ವೆಬ್‌ಸೈಟ್ **https:/kppp.Karnataka.gov.in**ಗೆ ಲಾಗ್‌ಆನ್ ಆಗಿ. **ಸಹಾಯವಾಣಿ ಸಂಖ್ಯೆ : +91 9240214000, +91 9240214001.**

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ

ಮೈಸೂರು ಜಿಲ್ಲೆ – 571107, ದೂ: 08223–273036
ಇ–ಮೇಲ್: itstaff_ulb_periyapatna@yahoo.com
ಸಂಖ್ಯೆ: ಪಿಪುಸ/ಪ.ಅ/ಟೆಂಡರ್–01–04/2026–27 **ದಿನಾಂಕ:** 06.05.2026

ಮರು ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ)

ಪಿರಿಯಾಪಟ್ಟಣ ಪುರಸಭೆಯ ವಿವಿಧ ಸೇವೆಗಳನ್ನು ಅರ್ಹರಿಂದ ಪಡೆಯಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು **https://kppp.karnataka.gov.in** ಪೋರ್ಟಲ್ ಮೂಲಕ ಟೆಂಡರ್ ಷರತ್ತು ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. **1)** ಟೆಂಡರ್‌ನ್ನು ಸಲ್ಲಿಸಲು ಕಡೆಯ **ದಿನಾಂಕ: 21.05.2026 ಸಂಜೆ 5:00 ಗಂಟೆಯವರೆಗೆ. 2)** ಟೆಂಡರ್ ತೆರೆಯುವ **ದಿನಾಂಕ: 22.05.2026ರ ಬೆಳಿಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ ಸಂ.	ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಲಾವಧಿ
1	DMA/2026-27/SE7686/CALL-2	16.10	40250	12 ತಿಂಗಳು
2	DMA/2026-27/SE7671/CALL-2	6.38	15970	12 ತಿಂಗಳು

ಸೂಚನೆ: 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಕೆಪಿಪಿಪಿ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಪಿರಿಯಾಪಟ್ಟಣ
DIPR/MYS/148/SA/2026-27

ಕರ್ನಾಟಕ ಸರ್ಕಾರ

ಕರ್ನಾಟಕ ಮೃಗಾಲಯ ಪ್ರಾಧಿಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ/ ಉಪ ನಿರ್ದೇಶಕರವರ ಕಾರ್ಯಾಲಯ ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ

ಇಮೇಲ್: dcf_tgulbarga@yahoo.co.in ಕಛೇರಿ ದೂ. ಸಂ. 08472-256601
ಸಂಖ್ಯೆ: ಉನಿ/ಕಿ.ಮೃ/ಹೊರಗುತ್ತಿಗೆ ನೌಕರರ/ಟೆಂಡರ್/ಸಿ.ಆರ್/2026–27 ದಿನಾಂಕ : 07–05–2026

:: ಅಲ್ಪಾವಧಿಯ ಇ–ಟೆಂಡರ್ ಪ್ರಕಟಣೆ ::

(**Karnataka Public Procurement Portal** ನಡಿಯಲ್ಲಿ ಮಾತ್ರ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಮಾನವ ಸಂಪನ್ಮೂಲ ಒದಗಿಸುವ ಟೆಂಡರನ್ನು Karnataka Public Procurement Portal ನಡಿಯಲ್ಲಿ ಆಹ್ವಾನಿಸಲಾಗಿದ್ದು. **ಸದರಿ ವಿವರ ಈ ಕೆಳಗಿನಂತಿವೆ.**
ವಿವರ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ರವರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ.
1) ಕಾಮಗಾರಿ : ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಮಾನವ ಸಂಪನ್ಮೂಲ ಒದಗಿಸುವ ಟೆಂಡರ್, 2) ಟೆಂಡರ್‌ಗಿಟ್ಟ ಮೊತ್ತ : **ಕನಿಷ್ಠ ರೂ. 57.00 ಲಕ್ಷ, ಗರಿಷ್ಠ ರೂ. 57.00 ಲಕ್ಷ,** 3) ಲೆಕ್ಕ ಶೀರ್ಷಿಕೆ : ZAK, 4) ಅರ್ಹತೆ : As per tender documents, 5) ಟೆಂಡರ್‌ಗೆ ಸಂಬಂಧಿಸಿದಂತೆ, ಪ್ರಶ್ನೆಗಳು ಮತ್ತು ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ : **13–05–2026 ಸಾಯಂಕಾಲ 4.00 ಗಂಟೆಗೆ,** 6) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **14–05–2026 ಸಾಯಂಕಾಲ 4.00 ಗಂಟೆಗೆ,** 7) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **15–05–2026 ರಂದು ಸಾಯಂಕಾಲ 4.30 ಗಂಟೆಗೆ,** 8) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **17–05–2026 ರಂದು ಸಾಯಂಕಾಲ 5.00 ಗಂಟೆಗೆ,** 9) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ, ಎಸ್.ಬಿ. ಟೆಂಪಲ್ ರೋಡ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ : http:kppp.karnataka.gov.in

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/102/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ

ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೀದರ.

ಸಂ: ಕಾನಿಅ/ಪಂರಾಇಂವಿ/ಬೀದರ/ತಾಶಾ–2/2026–27/159 ದಿನಾಂಕ: 07.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ, (ಇ–ಪ್ರೊಕ್ಯೂರಮೆಂಟ್)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ ವಿಭಾಗ, ಬೀದರ ಇವರಿಂದ ವಿವಿಧ ಯೋಜನೆಯಡಿ ಮಂಜೂರಾದ 27 ಕಾಮಗಾರಿಗಳಿಗೆ (ಕನಿಷ್ಟ **ರೂ. 4,15,820.42** (Rupees Four Lakhs Fifteen Thousand Eight Hundred Twenty and paise forty two only) ಮತ್ತು ಗರಿಷ್ಟ **167,84,805.38 ಮೊತ್ತದ** (Rupees One Crore Sixty Seven Lakhs Eighty Four Thousand Eight Hundred Five and paise thirty eight only) ಗುತ್ತಿಗೆದಾರರನ್ನು ನೇಮಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ಕೆ.ಡಬ್ಲ್ಯೂ–01, 02, 03 ಹಾಗೂ 04ರ ನಿಬಂಧನೆಗೊಳಪಟ್ಟು ಕೆ.ಪಿ.ಪಿ.ಪಿ.ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಂತರಜಾಲ ತಾಣ https://kppp.karnataka.gov.inನ್ನು ಸಂಪರ್ಕಿಸಬಹುದು.(Work Indent No:– 26578, 26406, 26564, 26561, 26547, 26013, 26247, 25188, 25189, 25190, 26293, 26291, 26289, 21574/CALL–2, 26405, 26546, 26545, 26442, 26441, 26440, 26439, 25393/CALL-2, 25447, 26548, 26580, 24965/CALL–2, 24968/CALL–2). ಟೆಂಡರ್ ಪ್ರಕ್ರಿಯೆ ದಿನಾಂಕಗಳು:
1. ಇ–ಪ್ರಾಕ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 08.05.2026 ರಿಂದ 18.05.2026 16:00 ಗಂಟೆವರೆಗೆ 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19.05.2026 ರಂದು 16:00 ಗಂಟೆ ನಂತರ 3. ಅರ್ಥಿಕ ಬಿಡ್ ತೆರೆಯುವ ದಿನಾಂಕ : 22.05.2026 ರಂದು 11:00 ಗಂಟೆ ನಂತರ

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/30/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ

ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಕಛೇರಿ, ಪಿ.ಎಂ ಪೋಷಣ್ ಶಕ್ತಿ ನಿರ್ಮಾಣ್ (ಮ.ಉ.ಯೋ) ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ.

email: eokodagumms@gmail.com
ಅದಾ:ಆಹಾರ ಸಾಗಾಣಿಕೆ ಟೆಂಡರ್/11/2025–26 ದಿನಾಂಕ:06.05.2026

ಆಹಾರ ಸಾಗಾಣಿಕೆ ಟೆಂಡರ್ e-procurement ಪ್ರಕಟಣೆ

ಕೊಡಗು ಜಿಲ್ಲೆಯ ಮೂರು ತಾಲ್ಲೂಕುಗಳ ಕೆ.ಎಫ್.ಸಿ.ಎಸ್.ಸಿ ಗೋದಾಮಿನಿಂದ ಅಕ್ಕಿ, ಗೋಧಿ, ತೊಗರಿಬೇಳೆ, ಸೂರ್ಯಕಾಂತಿ ಎಣ್ಣೆ ಆಹಾರ ಸಾಮಾಗ್ರಿಗಳನ್ನು ಆಯಾ ತಾಲ್ಲೂಕುಗಳ ಸರ್ಕಾರಿ ಮತ್ತು ಅನುದಾನಿತ ಶಾಲಾ ಅಡುಗೆ ಕೇಂದ್ರಗಳಿಗೆ ಸರಬರಾಜು ಮಾಡಲು ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿರವರಿಂದ ತಾಲ್ಲೂಕುವಾರು ಟೆಂಡರ್‌ಗಳನ್ನು e-procurement ಮೂಲಕ ಆಹ್ವಾನಿಸಲಾಗಿದೆ. (www.kppp.karnataka.gov.in) ಆಸಕ್ತಿಯುಳ್ಳವರು ಆರ್.ಸಿ ಹೊಂದಿದ (ಆರ್.ಟಿ.ಓ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ) ಲಾರಿ ಮಾಲಿಕರು, ಟೆಂಡರ್ ಹಾಕಲು ಇಚ್ಛೆ ಉಳ್ಳವರು KPPP portal ರಲ್ಲಿ ತಿಳಿಸಿದಂತೆ Tender Processing Fee ಯನ್ನು ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು, ಹೆಚ್ಚಿನ ವಿವರಗಳಿಗಾಗಿ www.eproc.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ.

1	ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ	ದಿನಾಂಕ:11.05.2026ರ ಬೆಳಗ್ಗೆ 10.30 ರಿಂದ
2	e-Tender ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ: 25.05.2026ರ ಸಂಜೆ 05.30 ಗಂಟೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ:27.05.2026 ರ ಬೆಳಿಗ್ಗೆ 11.30 ಗಂಟೆ
4	ಆರ್ಥಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ:29.05.2026 ರ ಬೆಳಿಗ್ಗೆ 11.30 ಗಂಟೆ

ಕ್ರ ಸಂ	ತಾಲ್ಲೂಕು	ಅಡುಗೆ ಕೇಂದ್ರಗಳ ಸಂಖ್ಯೆ	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	ಮಡಿಕೇರಿ	128	9350/–
2	ವಿರಾಜಪೇಟೆ	152	14625/–
3	ಸೋಮವಾರಪೇಟೆ	174	13800/–

ಹೆಚ್ಚಿನ ವಿವರಗಳಿಗೆ www.kppp.karnataka.gov.in KPPP portal ಅಥವಾ ಶಿಕ್ಷಣಾಧಿಕಾರಿಗಳು, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ ರವರ ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/– ಶಿಕ್ಷಣಾಧಿಕಾರಿಗಳು, ಪಿ.ಎಂ.ಪೋಷಣ್ ಶಕ್ತಿ ನಿರ್ಮಾಣ್ (ಮ.ಉ.ಯೋ) ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ

ಪ್ರಾದೇಶಿಕ ವಿಭಾಗ ಕಛೇರಿ ಡಿ.ಸಿ ಕಾಂಪೌಂಡ್, ಶಿವಮೊಗ್ಗ–577201
phone:08182-272210 FAX No: 08182-22565 EmailID: dcf.shivamoga@gmail.com
ಸಂಖ್ಯೆ: ಬಿ2/ಲಾಗಿಂಗ್/ಇ–ಹರಾಜು/ಆಲ್ಕೋಳ/ಸಿಆರ್–28/ ದಿನಾಂಕ: 28.04.2026

ಅರಣ್ಯ ಉತ್ಪನ್ನಗಳ ಇ–ಹರಾಜಿಗೆ ಸಂಬಂಧಪಟ್ಟ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶಿವಮೊಗ್ಗ ವಿಭಾಗದ ಸರ್ಕಾರಿ ನಾಟಾ ಸಂಗ್ರಹಾಲಯ, ಆಲೋಳ, ಶಿವಮೊಗ್ಗ ಇಲ್ಲಿ ದಾಸ್ತಾನು ಇರುವ ನಾಟಾ/ ಸೌದೆ/ ಬಿಲ್ಲೇಟ್/ ಪೋಲ್ಸ್ ಗಳನ್ನು ದಿನಾಂಕ: 30–05–2026 ರಂದು ಇ–ಹರಾಜು ಮೂಲಕ ವಿಲೇವಾರಿ ಮಾಡಲು ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಹರಾಜಿನಲ್ಲಿ ಈ ಕಛೇರಿಯ ಸವಿಸ್ತಾರ ಹರಾಜು ಪುಕಟಣೆ ಸಂಖ್ಯೆ: ಬಿ2/ಲಾಗಿಂಗ್/ಇ–ಹರಾಜು/ಆಲ್ಕೋಳ/ಸಿಆರ್–28/2025–26 ದಿನಾಂಕ: 28–04–2026 ರಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಇ ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.ಹಾಗೂ ಇ–ಹರಾಜಿನ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ www.etimber.in www.mstcecommerce.com ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಇ–ಹರಾಜಿಗೆ ಇಟ್ಟಿರುವ ಅರಣ್ಯ ಉತ್ಪನ್ನಗಳ ವಿವರ

ಕ್ರ ಸಂ	ಉಗ್ರಾಣದ ಹೆಸರು	ಉತ್ಪನ್ನಗಳ ವಿವರ		ಲಾಟ್ ಸಂಖ್ಯೆ	ಅಂದಾಜು ಪ್ರಮಾಣ (ಎಂ3 ಗಳಲ್ಲಿ)	ದಿನಾಂಕ ಮತ್ತು ಸೆಷನ್ಸ್
1	ಜಿ.ಟಿ.ಡಿ ಆಲ್ಕೋಳ ಶಿವಮೊಗ್ಗ	ಅಕೇಶಿಯಾ	ನಾಟಾ	120	6819-1173.277	30.05.2026 4 ession
2		ಅಕೇಶಿಯಾ ಸ್ಪಿಂಗ್ ವೆಲ್	ನಾಟಾ	05	7=1.353	
3		ಬೀಟೆ	ನಾಟಾ	51	253=20.329	
4		ಸಾಗುವಾನಿ	ನಾಟಾ	105	835=46.873	
5		ಇತರೆ ಜಾತಿ	ನಾಟಾ	148	375=93.488	
6		ಅಕೇಶಿಯಾ	ಸೈಜಸ್	01	5=0.055	
7		ಬೀಟೆ	ಸೈಜಸ್	03	28=1.340	
8		ಸಾಗುವಾನಿ	ಸೈಜಸ್	12	85=2.764	
9		ಇತರೆ ಜಾತಿ	ಸೈಜಸ್	03	20=0.383	
10		ಅಕೇಶಿಯಾ	ಪೋಲ್ಸ್	14	278 ಸಂಖ್ಯೆ	
11		ಅಕೇಶಿಯಾ ಸ್ಪಿಂಗ್ ವೆಲ್	ಪೋಲ್ಸ್	01	03 ಸಂಖ್ಯೆ	
12		ಬೀಟೆ	ಪೋಲ್ಸ್	01	04 ಸಂಖ್ಯೆ	
13		ಸಾಗುವಾನಿ	ಪೋಲ್ಸ್	14	229 ಸಂಖ್ಯೆ	
14		ಇತರೆ ಜಾತಿ	ಪೋಲ್ಸ್	06	325ಸಂಖ್ಯೆ	
15		ಅಕೇಶಿಯಾ	ಬಿಲ್ಲೇಟ್ಸ್	03	32.506	
16		ಬೀಟೆ	ಬಿಲ್ಲೇಟ್ಸ್	03	1.848	
17		ಸಾಗುವಾನಿ	ಬಿಲ್ಲೇಟ್ಸ್	04	1.061	
18		ಎನ್.ಟಿ.ಎಫ್.ಪಿ	–	01	60 ಸಂಖ್ಯೆ	
		ಒಟ್ಟು ಲಾಟ್ ಸಂಖ್ಯೆ		495		

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/35/05/204

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572103 ಫ್ಯಾಕ್ಸ್ : 0816–2255761 ದೂರವಾಣಿ : 2272280
website: tumakuru.uda.gov.in, email: tudatmk2009@yahoo.co.in
ಕ್ರಮಾಂಕ ಟಿಯುಡಿಎ/ಸಮುದಾಯ ಭವನ/ಇ–ಹರಾಜು/01/2026–27 ದಿನಾಂಕ : 07–05–2026

ಇ–ಹರಾಜು ಪ್ರಕಟಣೆ

ಮರಳೂರು ಸರ್ವೆ ನಂಬರ್‌ನಲ್ಲಿ ನಿರ್ಮಿಸಿರುವ ಸಮುದಾಯ ಭವನದ ನಿರ್ವಹಣೆಗೆ ಇ–ಹರಾಜು ಪ್ರಕಟಣೆ

1)	ಇ–ಹರಾಜಿನ ಪ್ರಕ್ರಿಯೆಯು ಪ್ರಾರಂಭವಾಗುವ ದಿನಾಂಕ	:	ದಿನಾಂಕ : 07–05–2026
2)	ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಪ್ರೋಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ ಪಾವತಿಸುವ ಕೊನೆಯ ದಿನಾಂಕ ಹಾಗೂ ಸಮಯ	:	ದಿನಾಂಕ : 21–05–2026 ಸಾಯಂಕಾಲ : 5.00 ಗಂಟೆವರೆಗೆ
3)	ಇ–ಹರಾಜಿನಲ್ಲಿ ಬಿಡ್ ಮಾಡುವ ಸಮಯ	:	ದಿನಾಂಕ : 22–05–2026 ರ ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 5.00 ಗಂಟೆಗೆ ಮುಕ್ತಾಯಗೊಳ್ಳುತ್ತದೆ. (ಡೆಲ್ಟಾ ಟೈಮ್ 0.05.00 ನಿಮಿಷ)

ತುಮಕೂರು ನಗರದ ಕುಣಿಗಲ್ ರಸ್ತೆ ಹಾಗೂ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಇರುವ ಪ್ರಾಧಿಕಾರದಿಂದ ರಚಿಸಿರುವ ಮರಳೂರು ಸರ್ವೆ ನಂಬರ್‌ನಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನವನ್ನು ಬಾಡಿಗೆ ನೀಡುವ ಬಗ್ಗೆ.

ಕ್ರ ಸಂ	ಸ್ಥಳ	ವಿಸ್ತೀರ್ಣ ಚ.ಮೀ. ಗಳಲ್ಲಿ	ಕನಿಷ್ಠ ಮಾಸಿಕ ಪ್ರೀಮಿಯಂ ರೂ. ಗಳಲ್ಲಿ	ಪಾವತಿಸ ಬೇಕಾಗಿರುವ. ಇ.ಎಂ.ಡಿ. ಮೊತ್ತ ರೂ. ಗಳಲ್ಲಿ	ಪಾವತಿಸಬೇಕಾದ ಠೇವಣಿ ಮೊಬಲಗು ರೂ. ಗಳಲ್ಲಿ
1	ಮರಳೂರು ಸಮುದಾಯ ಭವನ	ಕೆಳ ಮಹಡಿ 6804 ಚ.ಅ ನೆಲಮಹಡಿ 6410 ಚ.ಅ 1ನೇ ಮಹಡಿ 4256 ಚ.ಅ ಹಾಗೂ ಪಾರ್ಕಿಂಗ್ ಸ್ಥಳ: 13000 ಚ.ಅ	3,00,000	6,48,000	21,60,000

ವೆಬ್‌ಸೈಟ್ : kppp.karnataka.gov.in ಹಾಗೂ **website:tumakuru.uda.gov.in** ನಲ್ಲಿ ಇ–ಹರಾಜಿನ ಸಂಬಂಧ ಷರತ್ತು, ನಿಯಮ, ನಿಬಂಧನೆಗಳ ವಿವರಗಳನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ ಮತ್ತು ಇ–ಹರಾಜಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು, ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/– (ಶುಭ ಕಲ್ಯಾಣ್) ಭಾ.ಆ.ಸೇ., ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು
ಸಹಿ/– (ಉಮೇಶ್‌ಚಂದ್ರ ಎನ್.ಆರ್.) ಕೆ.ಎ.ಎಸ್., ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು
DIPR/TUM/RO-26/26-27/Oysters

ಕರ್ನಾಟಕ ಮುಕ್ತ ವಿವಿ ವಿಶ್ರಾಂತ ಕುಲಪತಿ ಪ್ರೊ.ರಂಗಪ್ಪಗೆ ಅಂತಾರಾಷ್ಟ್ರೀಯ ಮಾನ್ಯತೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ಹಾಗೂ ಕರ್ನಾಟಕ ಮುಕ್ತ ವಿವಿ ವಿಶ್ರಾಂತ ಕುಲಪತಿ, ಖ್ಯಾತ ರಸಾಯನಶಾಸ್ತ್ರಜ್ಞ, ವಿಜ್ಞಾನಿ ಕಂಚುಗಾರಕೊಪ್ಪಲು ಎಸ್.ರಂಗಪ್ಪ ಅವರಿಗೆ ರಿಸರ್ಚ್ ಡಾಟ್ ಕಾಮ್ ಸಂಸ್ಥೆಯಿಂದ



ಅಂತಾರಾಷ್ಟ್ರೀಯ ಮಟ್ಟದ ಗೌರವ ಲಭಿಸಿದೆ. 2026ನೇ ಸಾಲಿನ ಬೆಸ್ಟ್ ಸೈಂಟಿಸ್ಟ್ಸ್‌ಇನ್ ಕೆಮಿಸ್ಟ್ರಿ ಪಟ್ಟಿ ಪ್ರಕಟಿಸಿರುವ ಸಂಸ್ಥೆಯು, ರಂಗಪ್ಪ ಅವರನ್ನು ಭಾರತದಲ್ಲಿ 135ನೇ ಸ್ಥಾನ ಹಾಗೂ ಜಾಗತಿಕ ಮಟ್ಟದಲ್ಲಿ 8803ನೇಸ್ಥಾನಕ್ಕೆಆಯ್ಕೆಮಾಡಿದೆ. ಈ ರ್‍ಯಾಂಕಿಂಗ್ ಅನ್ನು ಡಿ-ಇಂಡೆಕ್ಸ್ ಆಧಾರದಲ್ಲಿ ನಿರ್ಧರಿಸಲಾಗಿದ್ದು, ರಸಾಯನಶಾಸ್ತ್ರ ಕ್ಷೇತ್ರದಲ್ಲಿನ ಸಂಶೋಧನಾ ಲೇಖನ ಹಾಗೂ ಉಲ್ಲೇಖಗಳ ಮೌಲ್ಯಗಳನ್ನು ಪರಿಗಣಿಸಲಾಗಿದೆ. ರಸಾಯನಶಾಸ್ತ್ರ ವಿಭಾಗದಲ್ಲಿ ಕನಿಷ್ಠ 40 ಡಿ-ಇಂಡೆಕ್ಸ್ ಹೊಂದಿರುವ ಪ್ರಮುಖ ವಿಜ್ಞಾನಿಗಳನ್ನು ಮಾತ್ರ ಈ ಪಟ್ಟಿಗೆ ಆಯ್ಕೆ ಮಾಡಲಾಗಿದೆ.

ಸಿಐಎಸ್‌ಎಫ್ ಎಎಸ್‌ಐ ನಾಪತ್ತೆ

ಮೈಸೂರು: ನಗರದ ಆರ್‌ಬಿಐ ನೋಟು ಮುದ್ರಣಾಲಯ ಬ್ಯಾಚುಲರ್ ವಸತಿಗೃಹದಲ್ಲಿ ವಾಸವಾಗಿದ್ದ ಸಿಐಎಸ್‌ಎಫ್ ಘಟಕದ ಎಎಸ್‌ಐ, ಲೇ.ಚಿಕ್ಕ ಪೂಜಪ್ಪ ಎಂಬವರ ಪುತ್ರ ಎ.ಸಿ.ಕೃಷ್ಣಪ್ಪ(59) ನಾಪತ್ತೆಯಾಗಿದ್ದಾರೆ. ಮೇ 5ರ



ಸಂಜೆ 7ಕ್ಕೆ ಗೇಟ್ ನಂ.1ರ ಮೂಲಕ ಹೊರಗೆ ಹೋದ ಎ.ಸಿ. ಕೃಷ್ಣಪ್ಪ ಅವರು ವಾಪಸ್ ಬಂದಿಲ್ಲ. ಎಲ್ಲಾ ಕಡೆ ಶೋಧ ಕಾರ್ಯ ನಡೆಸಿದರೂ ಪತ್ತೆಯಾಗಿಲ್ಲ. ಅವರು ಮೇ 31 ರಂದು ಸೇವೆಯಿಂದ ನಿವೃತ್ತಿಯಾಗುತ್ತಿದ್ದು, ಅವರನ್ನು ಪತ್ತೆ ಮಾಡಿಕೊಡುವಂತೆ ಸಿಐಎಸ್‌ಎಫ್ ಅಧಿಕಾರಿ ದೂರು ನೀಡಿದ್ದಾರೆ. ಚಹರೆ- 5.8 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಕೋಲು ಮುಖ, ಕಪ್ಪು ಬಿಳಿ ತಲೆ ಕೂದಲು, ಕಾಣೆಯಾದ ದಿನ ಪಿಂಕ್ ಕಲರ್ ಟೀ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದರು. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ದೂ. 0821-2418315 ಸಂಪರ್ಕಿಸಲು ಮೇಟಗಳ್ಳಿ ಠಾಣೆಯ ಪೊಲೀಸರು ಕೋರಿದ್ದಾರೆ.

ಪತ್ರಕರ್ತರ ಮಕ್ಕಳಿಂದ ಅರ್ಜಿ

ಮೈಸೂರು: ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪತ್ರಕರ್ತರ ಮಕ್ಕಳಿಗೆ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಲು ನಿರ್ಧರಿಸಲಾಗಿದ್ದು, ಮೇ 10 ರೊಳಗೆ ಆಸಕ್ತರು ಅರ್ಜಿ ಸಲ್ಲಿಸಬಹುದು. ಹೆಚ್ಚು ಅಂಕ ಪಡೆದ ಎಸ್ಸೆಸ್ಸೆಲ್ಸಿಯ ಒಬ್ಬ ವಿದ್ಯಾರ್ಥಿ, ಪಿಯುಸಿಯಲ್ಲಿ ಒಬ್ಬ ವಿದ್ಯಾರ್ಥಿಗೆ ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಇದೇ ಮೊದಲ ಬಾರಿಗೆ ಹಿರಿಯ ಪತ್ರಕರ್ತ ದಿ. ರಾಜಶೇಖರ ಕೋಟಿ. ದಿ..ಕೆ.ಬಿ.ಗಣಪತಿ ಅವರ ಹೆಸರಿನಲ್ಲಿ ಪುರಸ್ಕಾರನೀಡಲಾಗುತ್ತಿದೆ. ಜಿಲ್ಲೆಯಲ್ಲಿಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರ ಮಕ್ಕಳು ಈ ಪುರಸ್ಕಾರ ಪಡೆಯಲು ಅರ್ಜಿ ಸಲ್ಲಿಸಬಹುದು. ಹೆಚ್ಚುಅಂಕಪಡೆದವಿದ್ಯಾರ್ಥಿಗಳುಅಂಕಪಟ್ಟಿಯ ಪ್ರತಿಯೊಂದಿಗೆ ವಾಟ್ಸಪ್ ನಂಬರ್86182 34302, 94497 94133, 98458 25223 ಗೆ ಕಳುಹಿಸಬಹುದು.



ಚಿತ್ರದುರ್ಗದಲ್ಲಿ ಶನಿವಾರ ನಡೆಯುವ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಶುಕ್ರವಾರ ಪುರಪ್ರವೇಶ ಮಾಡಿದ ಬಿ.ಎಸ್.ಯಡಿಯೂರಪ್ಪ ಅವರನ್ನು ಮೈಸೂರು ಜಿಲ್ಲಾ ನಿಕಟಪೂರ್ವ ಜಿಲ್ಲಾ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಸನ್ಮಾನಿಸಿದರು. ಹಿರಿಯ ಮುಖಂಡರಾದ ಶಂಕರ್ ರಾವ್, ಶಿವಮೊಗ್ಗ ಸಂಸದ ಬಿ.ವೈ ರಾಘವೇಂದ್ರ, ಚೇತನ್, ಹೇಮಾಶಂಕರ್‌ಇದ್ದರು.

ಹೃದಯ ಸ್ಪಂದನ: ಹಿರಿಯರ ಆರೈಕೆ ಕೇಂದ್ರ



• **ಕನ್ನಡಪ್ರಭ ವಾರ್ತೆ** ಮೈಸೂರು

ಸಮಾಜದಲ್ಲಿ ಹಿರಿಯ ನಾಗರಿಕರ ಆರೈಕೆಗರಿಗೆ ನವೀನ ಮಾದರಿ ಪರಿಚಯಿಸುವ ಉದ್ದೇಶದಿಂದ ಹಾರ್ಟ್ ಸಂಸ್ಥೆ ವತಿಯಿಂದ ಹೃದಯ ಸ್ಪಂದನ ವೃದ್ಧರ ಆರೈಕೆ ಕೇಂದ್ರವನ್ನು ಗುರುವಾರ ಪ್ರಾರಂಭಿಸಲಾಯಿತು.

ಹಾರ್ಟ್ ಸಂಸ್ಥೆ ಆರೋಗ್ಯ, ಶಿಕ್ಷಣ ಮತ್ತು ಪುನರ್ವಸತಿ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಕಳೆದ ಐದು ವರ್ಷಗಳಲ್ಲಿ ಹಿಂದುಳಿದ ಹಾಗೂ ನಿಶಕ್ತ ವರ್ಗಗಳೊಂದಿಗೆ ನಿಕಟ ಸಂಪರ್ಕ ಸಾಧಿಸಿ ಅವರ ಜೀವನಮಟ್ಟ ಸುಧಾರಿಸುವಲ್ಲಿ ಮಹತ್ವದ ಅನುಭವ ಹೊಂದಿದೆ.

ವಿಶೇಷವಾಗಿ ಕುಟುಂಬದ ಆರೈಕೆಯಿಲ್ಲದ ಹಿರಿಯರು ಎದುರಿಸುತ್ತಿರುವ ಮಾನಸಿಕ, ದೈಹಿಕ ಹಾಗೂ ಸಾಮಾಜಿಕ ಸಮಸ್ಯೆಗಳ ತೀವ್ರತೆಯನ್ನು ಸಂಸ್ಥೆ ನೇರವಾಗಿ ಗುರುತಿಸಿದೆ.

ಹಾರ್ಟ್ ಸಂಸ್ಥೆ ಸಂಸ್ಥಾಪಕ ಶಿವಕುಮಾರ್, ಈ ಯೋಜನೆ ಕುರಿತು ಮಾತನಾಡಿ, ಹಿರಿಯರು ನಮ್ಮ ಸಮಾಜದ ಅಮೂಲ್ಯ ಸಂಪತ್ತು. ಅವರನ್ನು ನಿರ್ಲಕ್ಷಿಸುವ ಬದಲು, ಅವರ ಅನುಭವ ಮತ್ತು ಭಾವನೆಗಳನ್ನು ಗೌರವಿಸಿ, ಕುಟುಂಬದೊಂದಿಗೆ ಮರುಸಂಪರ್ಕ ಸಾಧಿಸಿ ಸಾಮರಸ್ಯಯುಕ್ತ ಕುಟುಂಬದ ಮರು ಸ್ಥಾಪನೆಗೆ ನಮ್ಮ ಸಂಸ್ಥೆಯ ಈ ಪ್ರಯತ್ನ ನೆರವಾಗುವುದು ಎಂದರು.

ಈ ಹಿನ್ನೆಲೆಯಲ್ಲೇ ಮೈಸೂರು ನಗರದ ವರ್ತುಲ ರಸ್ತೆ ಸಮೀಪದ ಕೋಟೆ ಹುಂಡಿಯಲ್ಲಿ ಹೃದಯ ಸ್ಪಂದನ ವೃದ್ಧಾಶ್ರಮ ಸ್ಥಾಪಿಸಿದ್ದು, ಈ ಕೇಂದ್ರವು ಕೇವಲ ಆಶ್ರಯ ನೀಡುವ ವೃದ್ಧಾಶ್ರಮವಾಗಿರದೆ, ಹಿರಿಯ ನಾಗರಿಕರ ಸಂಪೂರ್ಣ ಕಲ್ಯಾಣವನ್ನು ಗುರಿಯಾಗಿಸಿಕೊಂಡ ಮಾದರಿ ಕೇಂದ್ರವಾಗಿರಲಿದೆ ಎಂದರು.

ಹೆಚ್ಚಿನ ಮಾಹಿತಿಗೆ ಹೃದಯ ಸ್ಪಂದನ ಹಿರಿಯರ ಆರೈಕೆ ಕೇಂದ್ರ, ಹಾರ್ಟ್ ಸಂಸ್ಥೆ, ಮಾನಂದವಾಡಿ ರಸ್ತೆ, ರಿಂಗ್ ರೋಡ್ ಹತ್ತಿರ, ಕೋಟೆಹುಂಡಿ (ಹಾಲಾಳು) ಮೈಸೂರು 570008 ಅಥವಾ ಮೊ. 93536 30903, ಇಮೇಲ್ ವಿಳಾಸ heartorganisation2022@gmail.com ಸಂಪರ್ಕಿಸಬಹುದು.